ಸಂಪುಟ : 8 ಸಂಚಿಕೆ : 190 ಪುಟ : 4 ಬೆಲೆ : 3.00 ಶುಕ್ರವಾರ ಸಪ್ಟೆಂಬರ್ 01, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 190 Pages : 4 Price : 3.00 Friday September 01, 2023 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ವಿದ್ಯುತ್ ಪೂರೈಕೆಯಲ್ಲಿ ಕೊರತೆ: ಸಹಕರಿಸಲು ಮನವಿ

■ವಿಜಯಸಾಕ್ಷಿ ಸುದ್ದಿ, ಗದಗ

ರಾಜ್ಯದಲ್ಲಿ ಸೌರ/ಪವನ/ಜಲ ವಿದ್ಯುತ್ ಉತ್ಪಾದನೆ ಕುಂಠಿತಗೊಂಡಿರುವುದರಿಂದ ಹಾಗೂ ಮುಂಗಾರು ಮಳೆ ಕೊರತೆಯಾಗಿರುವುದರಿಂದ ವಿದ್ಯುತ್ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಬೇಡಿಕೆ ಮತ್ತು ಪೂರೈಕೆಯಲ್ಲಿ ಕೊರತೆಯುಂಟಾಗಿರುತ್ತದೆ.

ಆದ್ದರಿಂದ, ಅನಿಯಮಿತವಾಗಿ ವಿದ್ಯುತ್ ಕಡಿತ ಮಾಡಲಾಗುತ್ತಿದೆ. ಕಾರಣ, ರೋಣ ವಿಭಾಗದ ವ್ಯಾಪ್ತಿಯಲ್ಲಿ ಬರುವ ಗದಗ ಜಿಲ್ಲೆಯ ರೋಣ, ಗಜೇಂದ್ರಗಡ ಮತ್ತು ನರಗುಂದ ತಾಲೂಕುಗಳಲ್ಲಿನ ರೈತರ ಪಂಪ್‌ಸೆಟ್‌ಗಳಿಗೆ ಅನಿಯಮಿತವಾಗಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ರೈತರು/ಸಾರ್ವಜನಿಕರು ಸದರಿ ಪ್ರಕಟಣೆ ಗಮನಿಸಿ ಕಂಪನಿಯೊಂದಿಗೆ ಸಹಕರಿಸಬೇಕೆಂದು ಹುವಿಸಕಂನಿ., ರೋಣ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರರು ತಿಳಿಸಿದ್ದಾರೆ.

## ಪೊಲೀಸ್ ಜಾಗೃತಿ ಕಾರ್ಯಕ್ರಮ



■ವಿಜಯಸಾಕ್ಷಿ ಸುದ್ದಿ, ಗದಗ

ನಗರದ ವಿಜಯ ಲಲಿತಕಲಾ ಸಂಸ್ಥೆಯ ವಿಜಯ ಪದವಿಪೂರ್ವ ಮಹಾವಿದ್ಯಾಲಯದ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಗುರುವಾರದಂದು ರಾಜೀವಗಾಂಧಿ ಪೊಲೀಸ್ ಬಡಾವಣೆಯಲ್ಲಿ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಪೊಲೀಸ್ ಠಾಣೆಯ ಪಿಎಸ್‌ಐ ಉಮಾ ವಗ್ಗರ್ ಅವರು ವಿದ್ಯಾರ್ಥಿಗಳಿಗೆ ಎಫ್‌ಐಆರ್ ಬಗ್ಗೆ, ಅಪರಾಧಗಳು, ಪೊಲೀಸ್ ಆಯುಧಗಳು, ಪೊಲೀಸ್ ವಿಭಾಗಗಳ ಬಗ್ಗೆ, ಎಎಸ್‌ಐ ಅಳಗುಂಡಿಯವರು ಪೊಲೀಸ್ ಹುದ್ದೆಯ ವಿಭಾಗಗಳ ಬಗ್ಗೆ, ಕಾನ್ಸ್‌ಟೇಬಲ್ ಎಸ್.ಎಚ್ ಕಮತರ, ಕೊಟ್ರೇಶ ಮತ್ತು ಮಾಂತೇಶ ಎಚ್.ಡಿ ಅವರು ರೈಫಲ್, ಪಿಸ್ತೂಲ್‌ಗಳು ಮತ್ತು ಇನ್ನಿತರ ಆಯುಧಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಠಾಣೆಯ ಅಧಿಕಾರಿಗಳು, ಸಿಬ್ಬಂದಿಗಳು, ಕಾಲೇಜಿನ ಉಪನ್ಯಾಸಕರಾದ ಗಣೇಶ ಚಲವಾದಿ, ಶೃತಿ ಪಾಟೀಲ ಮತ್ತು ವಿಶಾಲಾಕ್ಷಿ ಮೂಲಿಮನಿ ಉಪಸ್ಥಿತರಿದ್ದರು.

## ಸಾರ್ವಜನಿಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ನರಗುಂದ ತಾಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸರಕಾರಿ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ನರಗುಂದ ಇದರ ಹಳೆಯ ಕಟ್ಟಡವನ್ನು ತೆರವುಗೊಳಿಸಿದ್ದು, ಅನುಪಯುಕ್ತ ಸಾಮಗ್ರಿಗಳ ಬಹಿರಂಗ ಹರಾಜನ್ನು ಸಹಾಯಕ ನಿರ್ದೇಶಕರು ಅಥವಾ ಅವರಿಂದ ಅಧಿಕಾರ ಪಡೆದವರಿಂದ ಸೆಪ್ಟೆಂಬರ್ 12 ರಂದು ಬೆಳಿಗ್ಗೆ 11.30 ಗಂಟೆಗೆ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯ ನರಗುಂದದ ಗ್ರಂಥಾಲಯ ಕಟ್ಟಡದಲ್ಲಿ ಹರಾಜು ಮಾಡಲಾಗುವುದು. ಹರಾಜಿನ ಷರತ್ತು ಮತ್ತು ಹೆಚ್ಚಿನ ವಿವರಗಳನ್ನು ಸಹಾಯಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯ ಕಾರ್ಯಾಲಯದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಕಾರ್ಯಾಲಯದ ವೇಳೆಯಲ್ಲಿ ಅಧಿಕಾರಿಗಳನ್ನು ಅಥವಾ ದೂರವಾಣಿ ಸಂಖ್ಯೆ 08337–245731 ಸಂಪರ್ಕಿಸಬಹುದಾಗಿದೆ.

## ಎಂಜಿಎಂ ಶಾಲೆಯಲ್ಲಿ ರಕ್ಷಾಬಂಧನ ಆಚರಣೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಎಂಜಿಎಂ ಪೂರ್ವ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಕ್ಷೇತ್ರ ಪ್ರವಾಸದ ಮೂಲಕ ಬಿ.ಡಿ ತಟ್ಟಿ ಕಿವುಡ ಮಕ್ಕಳ ವಸತಿಯುತ ಶಾಲೆಗೆ ತೆರಳಿ, ರಕ್ಷಾ ಬಂಧನವನ್ನು ಆಚರಿಸಿದರು.

ಈ ಸಂದರ್ಭದಲ್ಲಿ ಎಂಜಿಎಂ ಶಾಲೆಯ ಮುಖ್ಯೋಪಾಧ್ಯಾಯರಾದ ದೀಪಾಲಿ ಪಾಟೀಲ ಮಾತನಾಡಿ, ಕೇವಲ ಒಡಹುಟ್ಟಿದವರು ಮಾತ್ರ ಸಹೋದರ–ಸಹೋದರಿಯರಲ್ಲ. ಒಬ್ಬ ಹೆಣ್ಣು ಸಂಕಷ್ಟದಲ್ಲಿದ್ದಾಗ ಆಕೆಯನ್ನು ರಕ್ಷಿಸುವವನೇ ರ–ಕ್ಷೆಯ ದ್ಯೋತಕ. ಸಮಾಜದಲ್ಲಿ ಸಹೋದರತೆ, ಪ್ರೀತಿ ಭಾವ ಮೂಡಲು ಈ ರೀತಿಯ ಹಬ್ಬಗಳ ಆಚರಣೆಗಳು ಪ್ರಮುಖವಾಗಿವೆ. ಸ್ತ್ರೀಯರು ಅಬಲರು ಎಂದಲ್ಲ. ಅವರ ರಕ್ಷಣೆ ನಮ್ಮ ಕರ್ತವ್ಯವಾಗಿದೆ. ಸನಾತನ ಸಂಪ್ರದಾಯದ ಪ್ರಕಾರ ಯಾವುದೇ ಕಾರ್ಯಕ್ಕೂ ನಾವು ಕಂಕಣಬದ್ಧರಾಗಬೇಕು. ಈ ಎಲ್ಲಾ ಕಾರಣಗಳಿಂದ ರಕ್ಷಾಬಂಧನವು ಸಂಘಟಿತವಾಗಿ ಹರಿದುಬಂದಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಎಂಜಿಎಂ ಪೂರ್ವ ಪ್ರಾಥಮಿಕ ಶಾಲೆಯ ಮಕ್ಕಳು, ಸಿಬ್ಬಂದಿ ವರ್ಗದವರು ಹಾಗೂ ಬಿ.ಡಿ ತಟ್ಟಿ ಕಿವುಡ ಮಕ್ಕಳು ವಸತಿ ಶಾಲೆ ಮಕ್ಕಳು, ಸಿಬ್ಬಂದಿ ವರ್ಗದವರು ಹಾಜರಿದ್ದರು.

### ಗದಗ ಜಿಲ್ಲಾಡಳಿತದಿಂದ ಕಾಯಕ ಯೋಗಿ ನುಲಿಯ ಚಂದಯ್ಯನವರ ಜಯಂತಿ ಕಾರ್ಯಕ್ರಮ

## ನುಲಿಯ ಚಂದಯ್ಯನವರ ಸಂದೇಶಗಳು ಸಾರ್ವಕಾಲಿಕ



■ವಿಜಯಸಾಕ್ಷಿ ಸುದ್ದಿ, ಗದಗ

ಕಾಯಕ ಯೋಗಿ ನುಲಿಯ ಚಂದಯ್ಯನವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ಕರೆನೀಡಿದರು.

ಗದಗ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಗುರುವಾರ ಬೆಳಿಗ್ಗೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಗದಗ ಇವರುಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ನುಲಿಯ ಚಂದಯ್ಯನವರ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ನುಲಿಯ ಚಂದಯ್ಯನವರ ಭಾವಚಿತ್ರಕ್ಕೆ ಪುಷ್ಪ ಸಮರ್ಪಣೆಯೊಂದಿಗೆ ಗೌರವ ಸಲ್ಲಿಸಿ, ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸತ್ಯ, ಶುದ್ಧ ನಡೆನುಡಿಗಳ ಮೂಲಕ ನುಲಿಯ ಚಂದಯ್ಯನವರು ಸಮಾಜದಲ್ಲಿನ ಓರೆ–ಕೋರೆಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ. ನುಲಿಯ ಚಂದಯ್ಯನವರು ಕಾಯಕ ನಿಷ್ಠೆ ಕುರಿತ ಸಂದೇಶಗಳನ್ನು ವಚನಗಳ ಮೂಲಕ ಸಾರಿದ್ದು, ಅವುಗಳು ಸಾರ್ವಕಾಲಿಕವಾಗಿವೆ ಎಂದು ತಿಳಿಸಿದರು.

ಲಿಂಗಧಾಳ ಸರಕಾರಿ ಪ್ರೌಢಶಾಲೆಯ ಶಿಕ್ಷಕ ಡಾ.ಶಾಂತಕುಮಾರ್ ಭಜಂತ್ರಿ ನುಲಿಯ ಚಂದಯ್ಯನವರ ಜೀವನ ಮತ್ತು ಸಂದೇಶಗಳ ಕುರಿತು ಉಪನ್ಯಾಸ ನೀಡಿ ಮಾತನಾಡುತ್ತಾ, ನುಲಿಯ ಚಂದಯ್ಯನವರು 12ನೇ ಶತಮಾನದ ಬಸವಣ್ಣನವರ, ಮಡಿವಾಳ ಮಾಚಿದೇವರ ಸಮಕಾಲೀನರು. ಇವರು ವಿಜಯಪುರದ ಶಿವಣಗಿಯಲ್ಲಿ ಹುಟ್ಟಿದರು. ತಮ್ಮ ಕಾಯಕದಿಂದ ಬಂದ ಹಣದಿಂದ ದಾಸೋಹ ಮಾಡುತ್ತಿದ್ದರು. ನುಲಿಯ ಚಂದಯ್ಯನವರು ತಮ್ಮ ವಚನಗಳ ಮೂಲಕ ಸಮಾಜದ ಓರೆ–ಕೋರೆಗಳನ್ನು ತಿದ್ದುವ ಕೆಲಸವನ್ನು ಮಾಡಿದ ಶರಣರಾಗಿದ್ದಾರೆ. ಇವರು ಹುಲ್ಲು ನಾರುಗಳನ್ನು ಬಳಸಿ ಹಗ್ಗ ತಯಾರಿಸುವ ಕಾಯಕ ಮಾಡುತ್ತಿದ್ದರು. ಚಂದಯ್ಯನವರು ಕಾಯಕದಿಂದ ಬಂದ ಹಣವನ್ನೇ ಸ್ವೀಕರಿಸುತ್ತಿದ್ದರು. ಅನ್ಯರ ದ್ರವ್ಯಕ್ಕೆ ಆಸೆ ಪಡುತ್ತಿರಲಿಲ್ಲ. ಇವರು ನುಲೇನೂರು ಎಂಬ ಗ್ರಾಮದಲ್ಲಿ ಲಿಂಗೈಕ್ಯರಾದರು ಎಂದು ಅವರ ಜೀವನ ಚರಿತ್ರೆಯನ್ನು ಹಾಗೂ ಅವರ ▶▶3ನೇ ಪುಟಕ್ಕೆ



> ನುಲಿಯ ಚಂದಯ್ಯನವರ 48 ವಚನಗಳು ಪ್ರಸ್ತುತ ಲಭ್ಯವಿವೆ. ಕಾಯಕದ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದ ಇವರು, ವಚನಗಳ ಮೂಲಕ ನಾಡಿಗೆ ಮಹತ್ವಪೂರ್ಣ ಸಂದೇಶ ಸಾರಿದ್ದಾರೆ. ಚಂದೇಶ್ವರ, ಚಂದೇಶ್ವರಲಿಂಗ ಹೀಗೆ ವಿವಿಧ ರೀತಿಯ ಅಂಕಿತಗಳನ್ನು ಇವರ ವಚನಗಳಲ್ಲಿ ಬಳಸಲಾಗಿದೆ. ಅತಿಯಾಸೆ ಬೇಡ ಎನ್ನುವುದು ಇವರ ತತ್ವವಾಗಿತ್ತು. ಗುರುವೇ ಆಗಲಿ, ಜಂಗಮರೇ ಆಗಲಿ ಎಲ್ಲರೂ ತಮ್ಮ ತಮ್ಮ ಕಾಯಕವನ್ನು ನಿಷ್ಠೆಯಿಂದ ಮಾಡಬೇಕೆಂದು ಹೇಳುತ್ತಿದ್ದರು. ಕಾಯಕದಿಂದ ಬಂದ ದ್ರವ್ಯ ಲಿಂಗಾರ್ಪಿತವಾಗುತ್ತದೆ. ಬಂದ ದ್ರವ್ಯವನ್ನು ಭಕ್ತಿಯಿಂದ ಲಿಂಗಕ್ಕೆ ಸಮರ್ಪಣೆ ಮಾಡಬೇಕು ಎಂದು ತಿಳಿಸಿಕೊಟ್ಟರು.
>
> – **ಡಾ.ಶಾಂತಕುಮಾರ್ ಭಜಂತ್ರಿ**
> ಲಿಂಗಧಾಳ ಸರಕಾರಿ ಪ್ರೌಢಶಾಲೆಯ ಶಿಕ್ಷಕರು.

### ಜಿಲ್ಲಾಡಳಿತದಿಂದ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತಿ ಕಾರ್ಯಕ್ರಮ

## ಸಮಾಜ ಸುಧಾರಣೆಯಲ್ಲಿ ಬ್ರಹ್ಮಶ್ರೀ ನಾರಾಯಣರ ಕೊಡುಗೆ ಅಪಾರ

■ವಿಜಯಸಾಕ್ಷಿ ಸುದ್ದಿ, ಗದಗ

ಸಮಾಜದಲ್ಲಿ ಅಸಮಾನತೆ ಹೋಗಲಾಡಿಸಿ, ಸಮಾಜ ಸುಧಾರಣೆಗಾಗಿ ಬ್ರಹ್ಮಶ್ರೀ ನಾರಾಯಣ ಗುರುಗಳ ಕೊಡುಗೆ ಅಪಾರವಾಗಿದೆ ಎಂದು ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್ ತಿಳಿಸಿದರು.

ಜಿಲ್ಲಾಡಳಿತ ಭವನದ ಮುಖ್ಯ ಸಭಾಂಗಣದಲ್ಲಿ ಗುರುವಾರ ಸಂಜೆ ಗದಗ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರುಗಳ ಸಹಯೋಗದಲ್ಲಿ ಜರುಗಿದ ಬ್ರಹ್ಮಶ್ರೀ ನಾರಾಯಣ ಗುರುಗಳ



ಜಯಂತಿ ಕಾರ್ಯಕ್ರಮದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಸರಳ ಜೀವನ ನಡೆಸಿದ ಅವರು, ಸಮಾಜದ ಎಲ್ಲ ವರ್ಗಗಳ ಜನರ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು. ಇವರ ತತ್ವ–ಸಂದೇಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ನುಡಿದರು.

ಸರ್ಕಾರಿ ▶▶3ನೇ ಪುಟಕ್ಕೆ

> ಕಾಯಕಕ್ಕೆ ಮಹತ್ವ ಕೊಡಬೇಕು ಎಂದು ಸಾರಿದ ಬ್ರಹ್ಮಶ್ರೀ ನಾರಾಯಣ ಗುರುಗಳು, ಬಾಲ್ಯದಲ್ಲಿ ಪಾಠಶಾಲೆಯಲ್ಲಿ ಪ್ರತಿಯೊಂದಕ್ಕೂ ಪ್ರಶ್ನೆ ಮಾಡುತ್ತಿದ್ದರು. ಅಗಾಧವಾದ ಮಂತ್ರ ಪಠಣ ಶಕ್ತಿ ಹೊಂದಿದ್ದರು. ಕೆಳವರ್ಗದ ಜನರಿಗೆ ಚಿಕಿತ್ಸೆ ನೀಡುತ್ತಿದ್ದರು. ಆಧ್ಯಾತ್ಮಿಕ ಗುರುಗಳು, ಯೋಗಿಗಳು, ಪರೋಪಕಾರಿಯೂ ಆಗಿದ್ದ ಇವರು ತಪಸ್ವಿಗಳಾಗಿದ್ದರು. ಅನೇಕ ಭಕ್ತರನ್ನು ಹೊಂದಿದ್ದರು. ದೇವಾಲಯಗಳನ್ನು ಕಟ್ಟಿಸಿದರು. ಕೇರಳದಲ್ಲಿ ದಲಿತೋದ್ಧಾರ ಚಳುವಳಿಗಳನ್ನು ಕೈಗೊಂಡು ಅನೇಕ ಆಶ್ರಮ, ಮಂದಿರಗಳನ್ನು, ಕಟ್ಟಿಸಿ ಸಮಾಜ ಸುಧಾರಣೆಯಲ್ಲಿ ತೊಡಗಿದರು. ಇವರ ತತ್ವಗಳು ಇಡೀ ಮನುಕುಲಕ್ಕೆ ಪ್ರಸ್ತುತವಾಗಿವೆ.
>
> – **ಪ್ರೊ. ಸಿದ್ಧಲಿಂಗೇಶ ಸಜ್ಜನಶೆಟ್ಟರ್.**
> ಸರ್ಕಾರಿ ಪ್ರಥಮದರ್ಜೆ ಮಹಿಳಾ ಕಾಲೇಜಿನ ಪ್ರಾಧ್ಯಾಪಕರು.

## ಇಂದು ತಾಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದ ಉದ್ಘಾಟನೆ

■ವಿಜಯಸಾಕ್ಷಿ ಸುದ್ದಿ, ಗದಗ

ಸರಕಾರಿ ಪದವಿ ಪೂರ್ವ ಶಾಲಾ ಶಿಕ್ಷಣ ಇಲಾಖೆ ಹಾಗೂ ಶ್ರೀ ಜಗದ್ಗುರು ಅನ್ನದಾನೀಶ್ವರ ಕರ್ನಾಟಕ ಪಬ್ಲಿಕ್ ಸ್ಕೂಲ್ ಸೊರಟೂರ ಇವರ ಸಂಯುಕ್ತ ಆಶ್ರಯದಲ್ಲಿ ಪ್ರಸ್ತುತ ಸಾಲಿನ ಗದಗ ತಾಲೂಕ ಮಟ್ಟದ ಪದವಿ ಪೂರ್ವ ಕಾಲೇಜುಗಳ ಎ ಗುಂಪಿನ ಕ್ರೀಡಾಕೂಟವನ್ನು ನಗರದ ಕೆ ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಸೆಪ್ಟೆಂಬರ್ 01 ಶುಕ್ರವಾರ ಬೆಳಿಗ್ಗೆ 8:30 ಕ್ಕೆ ಉದ್ಘಾಟನಾ ಸಮಾರಂಭ ಜರುಗಲಿದೆ.

ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಹಾಗೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಎಸ್. ಮಧು ಬಂಗಾರಪ್ಪ ಅವರುಗಳು ವಹಿಸುವರು.

ರಾಜ್ಯ ಕಾನೂನು ಮತ್ತು ಮಾನವ ಹಕ್ಕುಗಳ ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ.ಪಾಟೀಲ ಅವರು ಕಾರ್ಯಕ್ರಮದ ಅಧ್ಯಕ್ಷತೆ ಹಾಗೂ ಉದ್ಘಾಟನೆಯನ್ನು ನೆರವೇರಿಸುವರು.

ಮುಖ್ಯ ಅತಿಥಿಗಳಾಗಿ ಸರ್ಕಾರದ ಮುಖ್ಯ ಸಚೇತಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಸಲೀಂ ಅಹ್ಮದ್, ಸಂಸದರಾದ ಶಿವಕುಮಾರ ಉದಾಸಿ, ವಿಧಾನ ಪರಿಷತ ಸದಸ್ಯರುಗಳಾದ ▶▶3ನೇ ಪುಟಕ್ಕೆ

## ತಾಲೂಕಾಧ್ಯಕ್ಷರಾಗಿ ನಾಗರಾಜ ಲಮಾಣಿ ನೇಮಕ

■ವಿಜಯಸಾಕ್ಷಿ ಸುದ್ದಿ, ಗದಗ

ಸ್ವಾಭಿಮಾನಿ ಕರ್ನಾಟಕ ರಕ್ಷಣಾ ವೇದಿಕೆಯ ಲಕ್ಷ್ಮೇಶ್ವರ ತಾಲೂಕಾಧ್ಯಕ್ಷರಾಗಿ ನಾಗರಾಜ ಕೆ.ಲಮಾಣಿಯವರನ್ನು ಗದಗ ಜಿಲ್ಲಾಧ್ಯಕ್ಷರಾದ ಎಮ್.ಎ ಕುರ್ತಕೋಟಿಯವರ ಆದೇಶದ ಮೇರೆಗೆ ನೇಮಕ ಮಾಡಿ ಆದೇಶಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಎಮ್.ಎ ಕುರ್ತಕೋಟಿ, ನಮ್ಮ ಸ್ವಾಭಿಮಾನಿ ಕರವೇ, ಕನ್ನಡ ಭಾಷೆ, ನೆಲ, ಜಲಗಳಿಗೆ ಧಕ್ಕೆಯಾದಾಗ



ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡಿದ್ದೇವೆ. ನಮ್ಮದು ಒಂದೇ ಧರ್ಮ, ಅದು ಕನ್ನಡ ಧರ್ಮ. ನಮ್ಮ ಸಂಘಟನೆಯಿಂದ ದೀನ ದಲಿತರ, ಅಲ್ಪಸಂಖ್ಯಾತರ ಮತ್ತು ಬಡವರ ಪರ ಅನೇಕ ಹೋರಾಟ ಮಾಡುತ್ತಿದ್ದೇವೆ. ಗದಗ ಜಿಲ್ಲೆಯಲ್ಲಿ ನಮ್ಮ ಸಂಘಟನೆಯನ್ನು ಅತ್ಯಂತ ಬಲಿಷ್ಠ ಸಂಘಟನೆಯನ್ನಾಗಿ ಮಾಡಬೇಕೆಂದು ಕರೆ ನೀಡಿದರು.

ಈ ಸಂದರ್ಭದಲ್ಲಿ ಸ್ವಾಭಿಮಾನಿ ಕರವೇ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

### ವಸತಿ ನಿಲಯಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿಢೀರ್ ಭೇಟಿ, ಪರಿಶೀಲನೆ

## ಉಜ್ವಲ ಭವಿಷ್ಯದತ್ತ ಗಮನವಿಡಿ

■ವಿಜಯಸಾಕ್ಷಿ ಸುದ್ದಿ, ರೋಣ

ವಸತಿ ನಿಲಯಗಳಲ್ಲಿದ್ದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಕಾಲಹರಣ ಮಾಡದೆ ಓದುವುದಕ್ಕೆ ಸಮಯವನ್ನು ಮೀಸಲಿಡಬೇಕೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್ ನೇಮಗೌಡ ಹೇಳಿದರು.

ಅವರು ಗುರುವಾರ ತಾ.ಪಂ ಕಚೇರಿ ಹಿಂಭಾಗದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯಕ್ಕೆ ಧಿಡೀರ್ ಭೇಟಿ ನೀಡಿ



ಪರಿಶೀಲಿಸಿ, ವಿದ್ಯಾರ್ಥಿಗಳೊಂದಿಗೆ ಮಾತನಾಡಿದರು.

ಇದು ಸ್ಪರ್ಧಾತ್ಮಕ ಜಗತ್ತು. ಹೀಗಿರುವಾಗ, ವಿದ್ಯಾರ್ಥಿಗಳಾದ ನೀವೆಲ್ಲರೂ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಅಕ್ಷರ ಜ್ಞಾನ ಪಡೆಯುವತ್ತ ಗಮನ ಹರಿಸಬೇಕು. ವಿನಾಕಾರಣ ಸುತ್ತುವ ಬದಲು ಪುಸ್ತಕಗಳತ್ತ ದೃಷ್ಟಿ ನಡಬೇಕು. ಅಂದಾಗಲೇ ವಿದ್ಯಾರ್ಥಿಗಳು ಭವಿಷ್ಯದಲ್ಲಿ ಉತ್ತಮ ನಾಗರಿಕರಾಗಲು ಸಾಧ್ಯ ಎಂದ ಅವರು, ಗ್ರಂಥಾಲಯವನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಇದಕ್ಕೂ ಮೊದಲು ಎಸ್ಪಿಯವರು ವಸತಿ ನಿಲಯಗಳಲ್ಲಿನ ಕೊಠಡಿಗಳನ್ನು ವೀಕ್ಷಿಸಿದರು. ನಂತರ ವಸತಿ ನಿಲಯದಲ್ಲಿ ವಿದ್ಯಾರ್ಥಿಗಳಿಗಾಗಿ ತಯಾರಿಸಿದ ಆಹಾರದ ಗುಣಮಟ್ಟವನ್ನು ▶▶3ನೇ ಪುಟಕ್ಕೆ

> ವಸತಿ ನಿಲಯದಲ್ಲಿ ಉತ್ತಮ ಗ್ರಂಥಾಲಯವಿದ್ದು, ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು. ಭವಿಷ್ಯ ರೂಪಿಸುವ ದಿನಗಳನ್ನು ವಿದ್ಯಾರ್ಥಿಗಳು ವ್ಯರ್ಥ ಮಾಡಿಕೊಳ್ಳಬಾರದು. ಬರುವ ತಿಂಗಳಲ್ಲಿ ವಸತಿ ನಿಲಯಕ್ಕೆ ಬಂದು, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಹೇಗೆ ಎದುರಿಸಬೇಕು ಎನ್ನುವುದನ್ನು ತಿಳಿಸಿಕೊಡುತ್ತೇನೆ. ಮುಖ್ಯವಾಗಿ, ವಸತಿ ನಿಲಯವು ಅಚ್ಚುಕಟ್ಟಾಗಿ ನಿಯಮಾನುಸಾರ ನಡೆಯುತ್ತಿರುವುದು ಒಳ್ಳೆಯ ಬೆಳವಣಿಗೆಯಾಗಿದೆ.
>
> – **ಬಿ.ಎಸ್ ನೇಮಗೌಡ.**
> ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಗದಗ.

## ಸಾಕ್ಷಿ ಸುಭಾಷಿತ

**ಕಾಲು ಜಾರಿದರೆ ಚೇತರಿಸಿಕೊಳ್ಳಬಹುದು, ಆದರೆ ನಾಲಗೆ ಜಾರಿದರೆ ಮಾತ್ರ ಚೇತರಿಸಿಕೊಳ್ಳವುದು ಎಂದಿಗೂ ಅಸಾಧ್ಯ.**

**–ಬುದ್ಧಿಮಾತು**

## ಸಂಪಾದಕೀಯ

# ಒಂದು ದೇಶ ಒಂದು ಚುನಾವಣೆ

ಕೇಂದ್ರ ಸರ್ಕಾರ ಸೆಪ್ಟೆಂಬರ್ 18 ರಿಂದ 5 ದಿನಗಳ ಕಾಲ ವಿಶೇಷ ಅಧಿವೇಶನ ನಡೆಸಲು ನಿರ್ಧರಿಸಿದೆ. ಈ ಕುರಿತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಪ್ರಹ್ಲಾದ್ ಜೋಶಿ ಅಧಿಕೃತವಾಗಿ ಮಾಹಿತಿ ನೀಡಿದ್ದು, ಯಾವ ಕಾರಣಕ್ಕಾಗಿ ಅಧಿವೇಶನ ಕರೆಯಲಾಗಿದೆ ಎನ್ನುವ ವಿಚಾರವನ್ನು ಮಾತ್ರ ಸ್ಪಷ್ಟಪಡಿಸಿಲ್ಲ.

ವಿಶೇಷ ಅಧಿವೇಶನ ನಿಗದಿ ಮಾಡಿರುವ ವಿಷಯವಾಗಿ ಅನೇಕ ಸಂಸದರು ಈಗಾಗಲೇ ಅಪಸ್ವರ ಎತ್ತಿದ್ದಾರೆ. ಮುಖ್ಯವಾಗಿ ಮಹಾರಾಷ್ಟ್ರ ಸಂಸದರು, ಗಣೇಶ್ ಚತುರ್ಥಿ ಸಂದರ್ಭದಲ್ಲಿ ವಿಶೇಷ ಅಧಿವೇಶನ ಕರೆಯುವ ಉದ್ದೇಶವಾದರೂ ಏನು? ಇದು ಬಹುಸಂಖ್ಯಾತ ಹಿಂದೂಗಳ ಭಾವನೆಗಳಿಗೆ ಧಕ್ಕೆ ಉಂಟು ಮಾಡುತ್ತದೆ ಎನ್ನುವ ಆರೋಪಗಳನ್ನು ಸಹ ಮಾಡಿದ್ದಾರೆ.

ಇನ್ನು ಕೆಲವರು ಹೊಸ ಸಂಸತ್ ಭವನದ ಉದ್ಘಾಟನೆ ಕುರಿತಾಗಿ ಹಳೆ ಸಂಸತ್ ಭವನದಲ್ಲಿ ವಿಶೇಷ ಅಧಿವೇಶನವನ್ನ ಆರಂಭಿಸಿ, ಹೊಸ ಕಟ್ಟಡದಲ್ಲಿ ಮುಕ್ತಾಯಗೊಳಿಸುವ ಮೂಲಕ ಸಂಸತ್ ಭವನವನ್ನು ಲೋಕಾರ್ಪಣೆಗೊಳಿಸಲಾಗುತ್ತದೆ ಎನ್ನುವ ಊಹಾಪೋಹವೂ ಇದೆ. ಆದರೆ ಇದೆಲ್ಲದಕ್ಕಿಂತ ಮುಖ್ಯವಾಗಿ ಒಂದು ದೇಶ ಒಂದು ಚುನಾವಣೆ ವಿಷಯವಾಗಿ ಗಂಭೀರ ಚರ್ಚೆ ನಡೆಯಲಿದೆ ಎನ್ನುವ ಮಾತುಗಳು ಕೇಳಿ ಬರುತ್ತಿವೆ. ಸದ್ಯ ಭಾರತಕ್ಕೆ ಒಂದು ದೇಶ ಒಂದು ಚುನಾವಣೆ ನಡೆಯುವುದು ಅಗತ್ಯ ಮತ್ತು ಅವಶ್ಯಕವಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ಚುನಾವಣೆ ಎನ್ನುವುದು ಸರ್ವೆ ಸಾಮಾನ್ಯವಾಗಿದೆ. ಪ್ರತಿ ವರ್ಷ ದೇಶದ ಯಾವುದಾದರೂ ಒಂದು ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆದೆ ನಡೆಯುತ್ತೆ. ಕೆಲ ಸಂದರ್ಭದಲ್ಲಿ ಐದು ಆರು ರಾಜ್ಯಗಳಲ್ಲಿ ಚುನಾವಣೆ ನಡೆಯುತ್ತೆ. ಈ ಮಧ್ಯೆ ಗ್ರಾಮ ಪಂಚಾಯಿತಿ ಚುನಾವಣೆ, ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯಿತಿ ಚುನಾವಣೆ ಜೊತೆಗೆ ಲೋಕಸಭೆ ಚುನಾವಣೆಯೂ ನಡೆಯುತ್ತದೆ.

ಒಟ್ಟಾರೆ ದೇಶದ ನಾಗರಿಕರು ಚುನಾವಣೆಯನ್ನ ಜಪಿಸುವ ಅನಿವಾರ್ಯತೆ ಎದುರಾಗಿದೆ. ಈ ವ್ಯವಸ್ಥೆಯನ್ನ ಕೊನೆಗಾಣಿಸಿ ಒಂದು ದೇಶ ಒಂದು ಚುನಾವಣೆ ನಡೆಯುವಂತಾದರೆ, ಚುನಾವಣೆ ವ್ಯವಸ್ಥೆಯಲ್ಲಿ ಬಹುದೊಡ್ಡ ಬದಲಾವಣೆ ಕಾಣಲು ಸಾಧ್ಯವಾಗಲಿದೆ. ಆದರೆ ಸದ್ಯಕ್ಕೆ ಒಂದು ದೇಶ ಒಂದು ಚುನಾವಣೆ ನಡೆಸುವುದು ಕಷ್ಟವಾದರೂ, ಬರುವ ಸಂಸತ್ ಚುನಾವಣೆ ಸಂದರ್ಭದಲ್ಲಿ ಕನಿಷ್ಠ 10 ರಾಜ್ಯಗಳ ವಿಧಾನಸಭೆ ಚುನಾವಣೆ ಘೋಷಣೆಯಾದಲ್ಲಿ, ಮುಂದಿನ ದಿನಗಳಲ್ಲಿ ಒಂದೇ ಬಾರಿಗೆ ದೇಶಾದ್ಯಂತ ಚುನಾವಣೆ ನಡೆಸಲು ಸಾಧ್ಯವಾಗಬಹುದು.

ಮೇಲ್ನೋಟಕ್ಕೆ ಇದೊಂದು ಸವಾಲಿನ ಸಂಗತಿ ಎನಿಸಿದರೂ ಭವಿಷ್ಯದಲ್ಲಿ ಉತ್ತಮ ಫಲಿತಾಂಶ ಕಾಣಬಹುದು ಎಂದು ರಾಜಕೀಯ ಪಂಡಿತರು ಅಭಿಪ್ರಾಯವಾಗಿದೆ. ವಿಶೇಷ ಅಧಿವೇಶದಲ್ಲಿ ಈ ಬಗ್ಗೆ ಚರ್ಚೆ ನಡೆದರೆ ಒಳಿತು.

## ಕವನ

# ಕಣ್ಣಲಿಳಿದ ಬೆಳಕು

ಬೆಣ್ಣೆ ಚಂದ್ರ ಕಣ್ಣಲಿಳಿದ
ಎಣ್ಣೆ ಲಾಂದ್ರ ಏತಕೆ
ಸಣ್ಣ ಸುಂದ್ರ ಬಣ್ಣಬಳಿದ
ನುಣ್ಣ ಮನದ ಮಂಚಕೆ...

ತಂಬೆಲರ ನಡುಕ ಹೆಚ್ಚಿ
ಹೊಂಬಣ್ಣದ ಮೈಯಿಗೆ
ಅಂಬು ಮೇಣ್ ಚಳಿಯ ಹಚ್ಚಿ
ಕಂಬಳಿಯೆಳೆದೆ ಮೆಲ್ಲಗೆ...



ಸಾಗರವು ಉಕ್ಕಿ ಕರೆದು
ಮಾಗಿಚಳಿಯ ವೇಗಕೆ
ಸಾಗಿಬಂದ ಅಲೆಯು ಕೊರೆದು
ಬಾಗಿಬಳುಕೋ ಲಾಸ್ಯಕೆ...

ಕಾಯುತಿರಲು ಸನಿಹ ಬರುವ
ಬೇಯದಾಸೆ ತುಡಿತಕೆ
ನೋಯಿಸದೆ ಕೇಳುತಿರುವ
ಮಾಯದಾಸೆ ಮಿಡಿತಕೆ...

ಕಣ್ಣ ಹೊಳಪು ಕರೆದು ತಂತು
ಸಣ್ಣ ತಪ್ಪು ಮಾಡಲು
ತಣ್ಣ ಮಳಲ ತೀರ ಕೂತು
ಬಣ್ಣ ಕನಸು ಕಾಣಲು...

**–ಸಿ.ಎನ್ ಭಾಗ್ಯಲಕ್ಷ್ಮೀ ನಾರಾಯಣ, ಮೈಸೂರು.**





ಲಕ್ಷ್ಮೇಶ್ವರ ತಾಲೂಕಿನ ಗೊಜನೂರಿನ ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ರಕ್ಷಾ ಬಂಧನ ಆಚರಿಸಲಾಯಿತು.

## ಅಗಲಿದ ಕನ್ನಡ ಗಾರುಡಿಗನಿಗೆ ಅಕ್ಷರ ನಮನ

# ಕನ್ನಡ ನುಡಿಗಾಗಿ ದಣಿವರಿಯದೆ ದುಡಿದ ಪ್ರೊ. ಕೆರಿಮನಿ

ಕನ್ನಡ ಹಾಗೂ ಕನ್ನಡತನದ ಶ್ರೇಷ್ಠ ಶ್ರೀಮಂತ ಪರಂಪರೆಯನ್ನು ಉಳಿಸಿ, ಬೆಳೆಸಿ ಹೋದ ಗದಗ ಜಿಲ್ಲೆಯ ಮಹನೀಯರಲ್ಲಿ ಇತ್ತೀಚೆಗೆ ನಮ್ಮನ್ನಗಲಿದ ಪ್ರೊ. ಸಿ.ವಿ ಕೆರಿಮನಿಯವರು ಪ್ರಮುಖರು. ಕನ್ನಡ ಸಾರಸ್ವತ ಲೋಕದ ತಿರುಳ್ಗನ್ನಡ ನೆಲ ಪುಲಿಗೆರೆ ಅಂದರೆ ಈಗಿನ ಲಕ್ಷ್ಮೇಶ್ವರದ ಶ್ರೇಷ್ಠ ಸಾಹಿತ್ತಿಕ ರಾಯಭಾರಿ ಎಂದೇ ಹೆಸರಾದವರು ಪ್ರೊ. ಸಿ.ವಿ ಕೆರಿಮನಿಯವರು. ಇವರು ಕನ್ನಡ ಸಾಹಿತ್ಯ, ಸಂಸ್ಕೃತಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ಸುಮಾರು 4 ದಶಕಗಳಿಂದ ದಣಿವರಿಯದೆ ದುಡಿದು ಧೀಮಂತ ವ್ಯಕ್ತಿತ್ವವಾಗಿ ನಾಡಿನಲ್ಲೆಡೆ ಗುರುತಿಸಲ್ಪಟ್ಟಿದ್ದಾರೆ.

ಕನ್ನಡ ನಾಡು ನುಡಿಯ ಶ್ರೇಷ್ಠ ಸೇವಾ ಕಾರ್ಯಕ್ಕಾಗಿ 2012ರಲ್ಲಿ ಕರ್ನಾಟಕ ರಾಜ್ಯ ಸರಕಾರದಿಂದ ರಾಜ್ಯೋತ್ಸವ ಪ್ರಶಸ್ತಿ ಗೌರವಕ್ಕೆ ಪಾತ್ರರಾದ ಪ್ರೊ. ಸಿ.ವಿ ಕೆರಿಮನಿಯವರು ಮೂಲತಃ ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಮೊರಬ ಗ್ರಾಮದವರು. ಪೂರ್ಣ ಹೆಸರು ಚನ್ನಪ್ಪ ವಿರುಪಾಕ್ಷಪ್ಪ ಕೆರಿಮನಿ. 08-02-1941ರಲ್ಲಿ ಜನನ ಹಾಗೂ ಧಾರವಾಡದಲ್ಲಿ ಶಿಕ್ಷಣ.

ಮುಂದೆ ಲಕ್ಷ್ಮೇಶ್ವರದ ಪುರಸಭಾ ಕಲಾ ಪದವಿ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಅಪಾರ ಸಂಖ್ಯೆಯ ವಿದ್ಯಾರ್ಥಿಗಳಲ್ಲಿ, ಅದರಲ್ಲೂ ಗ್ರಾಮೀಣ ಪರಿಸರದಲ್ಲಿ ಕನ್ನಡ ಭಾಷೆ, ಸಾಹಿತ್ಯದ ಡಿಂಡಿಮ ಮೊಳಗಿಸಿದ ಶ್ರೇಯಸ್ಸು ಪ್ರೊ. ಸಿ.ವಿ.ಕೆಯವರಿಗೆ ಸಲ್ಲುತ್ತದೆ.

ಹಂಪಿ ಕನ್ನಡ ವಿ.ವಿ ಆಡಳಿತದ ಸದಸ್ಯರು, ಕರ್ನಾಟಕ ವಿ.ವಿ ಕಾಲೇಜು ಶಿಕ್ಷಕ ಸಂಘದ ಉಪಾಧ್ಯಕ್ಷರು, ಅಕಾಡೆಮಿಕ್ ಕೌನ್ಸಿಲ್ ಸದಸ್ಯರು, ಕನ್ನಡ ಪುಸ್ತಕ ಪ್ರಾಧಿಕಾರದ ಸದಸ್ಯರು, ಗದಗ



ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಥಮ ಹಾಗೂ ಸತತ ಎರಡು ಬಾರಿ ಅಧ್ಯಕ್ಷರಾಗಿ ಸಲ್ಲಿಸಿದ ಅವರ ನಾಡು-ನುಡಿ ಸೇವೆ ಅನನ್ಯ, ಅನೂಹ್ಯವಾದುದು. ನವಲಗುಂದದಲ್ಲಿ ನಡೆದ ತಾಲೂಕು ಕಸಾಪ ಸಮ್ಮೇಳಾನಾಧ್ಯಕ್ಷರಾಗಿಯೂ ಕನ್ನಡ ತೇರನೆಳೆದವರು.

ಭಾರತೀಯ ಹಬ್ಬಗಳು, ತಿರುಳ್ಗನ್ನಡನಾಡು ಪುಲಿಗೆರೆ, ಷಡಕ್ಷರದೇವ, ವೀರಶೈವ ಸಾಹಿತ್ಯ ಸಮೀಕ್ಷೆ, ಗೊಮ್ಮಟ ದರ್ಶನ, ಮೈಲಾರ ಮಹಾದೇವ, ಚೆಲುವ ಕನ್ನಡ, ಗದಗ ಜಿಲ್ಲೆ ಒಂದು ಅಧ್ಯಯನ ಗದಗಿನಲ್ಲಿ ನಡೆದ 76ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂಪಾದಿತ 'ಬೆಳ್ವೊಲ ಬೆಳಕು' ಗ್ರಂಥ... ಹೀಗೆ ಸುಮಾರು 30ಕ್ಕೂ ಅಧಿಕ ಶ್ರೇಷ್ಠ ಕೃತಿಗಳನ್ನು ರಚಿಸಿ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ.

ನುಡಿಗಾಗಿ ಜೀವನವಿಡೀ ದುಡಿದ ಪ್ರೊ.ಸಿ.ವಿ.ಕೆಯವರನ್ನು ಹಲವಾರು ಪ್ರತಿಷ್ಠಿತ ಪ್ರಶಸ್ತಿ ಗೌರವಗಳು ಅರಸಿ ಬಂದಿವೆ. ಅವುಗಳಲ್ಲಿ ಪ್ರಮುಖವಾಗಿ 2016ರಲ್ಲಿ ಕರ್ನಾಟಕ ಸರಕಾರ ಸಾಹಿತ್ಯ ಕ್ಷೇತ್ರದ ಸೇವೆಗಾಗಿ ಹಿರಿಯ ನಾಗರಿಕ ಪ್ರಶಸ್ತಿ, ಶರೀಫ ಪ್ರಶಸ್ತಿ, ರಾಜ್ಯಮಟ್ಟದ ಮನುಕುಲ ಪ್ರಶಸ್ತಿ, ಅಮೋಘವರ್ಷ ನೃಪತುಂಗ ಪ್ರಶಸ್ತಿ, ಉತ್ತಮ ರೋಟರಿ ಕ್ಲಬ್ ಅಧ್ಯಕ್ಷ ಪ್ರಶಸ್ತಿ ಸೇರಿ, ಕಿರೀಟವೆಂಬಂತೆ 2012ನೇ ಸಾಲಿನ ಕರ್ನಾಟಕ ಸರಕಾರದ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ'ಗೆ ಭಾಜನರಾಗಿದ್ದಾರೆ.

ಗದಗ ಜಿಲ್ಲೆ ಸೇರಿದಂತೆ ಅಖಂಡ ಧಾರವಾಡ ಜಿಲ್ಲೆಯ ಕನ್ನಡ ಸಾಹಿತ್ಯಿಕ ಪರಿಸರದಲ್ಲಿ ಇವರದು ಅತ್ಯಂತ ಸ್ತುತ್ಯಾರ್ಹ ಕಾರ್ಯ. ಒಂದು ತಲೆಮಾರಿಂದ ಮುಂದಿನ ತಲೆಮಾರಿಗೆ ಕನ್ನಡತನವನ್ನು ತಮ್ಮ ಕಾರ್ಯಗಳ ಮುಖಾಂತರ ಯಶಸ್ವಿಯಾಗಿ ದಾಟಿಸಿದ್ದಾರೆ. ಗದಗ ಜಿಲ್ಲೆಯಲ್ಲಿ ಏನೂ ಜಾಗೃತಿ ಇಲ್ಲದ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿ ಬೆಳೆಸಿದ ಕೀರ್ತಿ ಪ್ರೊ. ಸಿ.ವಿ ಕೆರಿಮನಿಯವರಿಗೆ ಸಲ್ಲುತ್ತದೆ.

ಇಂತಹ ಅಪರೂಪದ ಸಾಧಕರು ಇದೇ ಆಗಸ್ಟ್ 29ರಂದು ತಮ್ಮ 84ನೇ ವಯಸ್ಸಿನಲ್ಲಿ ಕೊನೆಯುಸಿರೆಳೆದು ತಮ್ಮ ಸಾಹಿತ್ಯ ಸೇವಾ ಯಾತ್ರೆಯನ್ನು ಮುಗಿಸಿದ್ದು, ಈ ಭಾಗದ ಕನ್ನಡ ಮನಸ್ಸುಗಳಿಗೆ ಕಣ್ಣೀರು ತರಿಸಿದೆ.

ಅವರ ಎಲ್ಲ ಸಾಧನೆಗಳಿಗೆ ಸ್ಫೂರ್ತಿಯಾಗಿ ಪ್ರತಿ ಹೆಜ್ಜೆಯಲ್ಲೂ ಜೊತೆಯಾಗಿ ನಿಂತ ಅವರ ಧರ್ಮಪತ್ನಿ, ಶ್ರೇಷ್ಠ ಶಿಕ್ಷಕಿ, ರಾಜ್ಯ ಮಟ್ಟದ ಲೇಖಕಿಯರ ಪ್ರಶಸ್ತಿ ಪುರಸ್ಕೃತ ಶ್ರೀಮತಿ ಲಲಿತಾ ಕೇರಿಮನಿಯವರನ್ನು, ಅವರ ಒಬ್ಬನೇ ಮಗ ಇಂಜಿನಿಯರಿಂಗ್ ಕಾಲೇಜು ಉಪನ್ಯಾಸಕ ಪ್ರೊ.ಸೋಮಶೇಖರ ಕೆರಿಮನಿ ಹಾಗೂ ಮೂವರು ಪುತ್ರಿಯರು, ಸೊಸೆ, ಮೊಮ್ಮಕ್ಕಳು, ಸಹೋದರಿ, ಸಹೋದರರು ಹಾಗೂ ಅಪಾರ ಸಂಖ್ಯೆಯ ಶಿಷ್ಯ ಬಳಗ, ಸಾಹಿತ್ಯಿಕ ಸಂಗಾತಿಗಳೆಲ್ಲರನ್ನು ಬಿಟ್ಟು ಅಗಲಿದ್ದಾರೆ. ಅವರ ನಿಧನದಿಂದ ಈ ಭಾಗದ ಶ್ರೇಷ್ಠ ಸಾಹಿತ್ಯಿಕ ಕೊಂಡಿ ಕಳಚಿದಂತಾಗಿದೆ.

**– ಈಶ್ವರ ಸೋ.ಮೆಡ್ಲೇರಿ.**
ಅಧ್ಯಕ್ಷರು, ಕಸಾಪ
ಲಕ್ಷ್ಮೇಶ್ವರ ಘಟಕ.

# ಸಮುದಾಯ ಭವನದ ನಿರ್ಮಾಣಕ್ಕೆ ಸಹಕರಿಸಿ

**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಸಂಸದ ಶಿವಕುಮಾರ ಉದಾಸಿ ಅವರು ಒದಗಿಸಿದ 10ಲಕ್ಷ ರೂ. ಅನುದಾನದಲ್ಲಿ ಸಮುದಾಯ ಭವನ ಕಾಮಗಾರಿ ಪ್ರಾರಂಭಿಸಲಾಗುತ್ತಿದೆ. ಕಿತ್ತೂರು ಚೆನ್ನಮ್ಮ ಸಮುದಾಯ ಭವನದ ನಿರ್ಮಾಣಕ್ಕೆ ಸಮಾಜದ ಪ್ರತಿಯೊಬ್ಬರ ಸಹಕಾರ ಅಗತ್ಯವಿದೆ ಎಂದು ತಾಲೂಕು ಪಂಚಮಸಾಲಿ ಸಮಾಜದ ಅಧ್ಯಕ್ಷ ಎಸ್.ವಿ ಪಾಟೀಲ ಹೇಳಿದರು.



ಪಟ್ಟಣದ ಪಂಚಮಸಾಲಿ ಸಮಾಜದ ವೀರರಾಣಿ ಕಿತ್ತೂರು ಚೆನ್ನಮ್ಮ ಸಮುದಾಯದ ಜಾಗೆಯಲ್ಲಿ ನೂತನ ಭವನ ನಿರ್ಮಾಣಕ್ಕೆ ಬುಧವಾರ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು. ಡಾ. ಅನ್ನದಾನಿ ಮೇಟಿ, ಕೊಟ್ರಗೌಡ ಪಾಟೀಲ, ಪ್ರೊ.ಆರ್.ಎಲ್ ಪೊಲೀಸ್‌ಪಾಟೀಲ, ಬಸವರಾಜ ದೇಸಾಯಿ, ಡಾ. ವಿ.ಕೆ ಸಂಕನಗೌಡ್ರ, ಶಿವಪ್ಪ ಅಂಕದ, ಎ.ವೈ ನವಲಗುಂದ, ಮಂಜುಳಾ ಇಟಗಿ, ಡಿ.ಟಿ ಪಾಟೀಲ ಮಾತನಾಡಿದರು.

ಕಾರ್ಯಕ್ರಮದಲ್ಲಿ ಬಾಗೇವಾಡಿ ಗ್ರಾ ಪಂ ಅಧ್ಯಕ್ಷ ಮಲ್ಲಿಕಾರ್ಜುನ ಹಣಜಿ, ಹಮ್ಮಿಗಿ ಗ್ರಾ ಪಂ ಅಧ್ಯಕ್ಷ ಅಬಾಸಾಹೇಬ ಬಹದ್ದೂರದೇಸಾಯಿ, ಕೊರ್ಲಹಳ್ಳಿ ಗ್ರಾ ಪಂ ಉಪಾಧ್ಯಕ್ಷ ರಾಜಶೇಖರ ಗುಡ್ಲಾನೂರ ಅವರನ್ನು ಸಮುದಾಯದ ವತಿಯಿಂದ ಸನ್ಮಾನಿಸಲಾಯಿತು.

ಪಂಚಮಸಾಲಿ ಸಮಾಜದ ಪ್ರಮುಖರಾದ ಅಶೋಕ ಹಂದ್ರಾಳ, ಮಂಜುನಾಥ ಮುಧೋಳ, ವೀರೇಶ ಹಡಗಲಿ, ಸೋಮು ಹಕ್ಕಂಡಿ, ಬಿ.ಕೆ ಪಾಟೀಲ, ಎ.ವಿ ಹಳ್ಳಿಕೇರಿ, ಮಂಜುನಾಥ ಇಟಗಿ, ಕವಿತಾ ಉಳ್ಳಾಗಡ್ಡಿ, ನಾಗೇಶ ಹುಬ್ಬಳ್ಳಿ, ಬಸವರಾಜ ಕೊತಂಬರಿ, ಲೋಕಪ್ಪ ನಂದಿಕೊಲ್, ಶಿವಪ್ಪ ಅಂಕದ, ಪ್ರಶಾಂತ ಗುಡದಪ್ಪನವರ, ದೇವಪ್ಪ ಇಟಗಿ, ರವೀಂದ್ರಗೌಡ ಪಾಟೀಲ, ಶಿವಾನಂದ ಕಮತರ, ರಮೇಶಗೌಡ ಪಾಟೀಲ, ಶರಣಪ್ಪ ಕಲ್ಲೂರು, ಈರಣ್ಣ ಮಜ್ಜಿಗಿ, ನಾಗರಾಜ ಮುರಡಿ, ರಾಕೇಶ ಹಳ್ಳಿಗುಡಿ, ಗಂಗಾಧರ ಅಣ್ಣಿಗೇರಿ, ನೇತ್ರಾ ಭಾವಿಹಳ್ಳಿ, ಭಾರತಿ ಮುದ್ದಿ, ಜಗದೀಶ ವಾಲಿ ಮುಂತಾದವರಿದ್ದರು.

# ಹಾರೋಗೇರಿ ಪ್ರಾಥಮಿಕ ಶಾಲೆ ಸಮಗ್ರ ವೀರಾಗ್ರಣಿ

**■ವಿಜಯಸಾಕ್ಷಿ ಸುದ್ದಿ, ಮುಂಡರಗಿ**

ಹಿರೇವಡ್ಡಟ್ಟಿ ಕ್ಲಸ್ಟರ್ ಮಟ್ಟದ 2023-24ನೇ ಸಾಲಿನ ಕ್ರೀಡಾಕೂಟವು ಸರ್ಕಾರಿ ಮಾದರಿ ಕೇಂದ್ರ ಶಾಲೆ, ಹಿರೇವಡ್ಡಟ್ಟಿಯಲ್ಲಿ ಇತ್ತೀಚೆಗೆ ಜರುಗಿತು. ಕ್ರೀಡಾಕೂಟದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾರೋಗೇರಿಯ ವಿದ್ಯಾರ್ಥಿಗಳು ಸಮಗ್ರ ವೀರಾಗ್ರಣಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.



ಬಾಲಕರ ಗುಂಪು ಆಟ ವಿಭಾಗದಲ್ಲಿ ಖೋಖೋ-ಪ್ರಥಮ, ಕಬ್ಬಡಿ ಹಾಗೂ ಥ್ರೋಬಾಲ್ ದ್ವಿತೀಯ ಸ್ಥಾನ ಪಡೆದರು. ಬಾಲಕಿಯರ ಗುಂಪು ಆಟ ವಿಭಾಗದಲ್ಲಿ ಕಬ್ಬಡಿ, ರಿಲೇ, ಥ್ರೋಬಾಲ್ ಪ್ರಥಮ, ಖೋಖೋ, ವಾಲಿಬಾಲ್ ಆಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ವೈಯಕ್ತಿಕ ವಿಭಾಗದಲ್ಲಿ ಪೂರ್ಣಿಮಾ ಶಂಕ್ರಪ್ಪ ಕಿನ್ನಾಳ 200ಮೀ ಓಟ, ಉದ್ದ ಜಿಗಿತ ಪ್ರಥಮ, ಕಾವೇರಿ ಕಿನ್ನಾಳ 100ಮೀ ಓಟದಲ್ಲಿ ಪ್ರಥಮ, 200ಮೀ ಓಟದಲ್ಲಿ ದ್ವಿತೀಯ, ಅನ್ನಪೂರ್ಣ ಓಲಿ ಎತ್ತರ ಜಿಗಿತ, ಉದ್ದ ಜಿಗಿತದಲ್ಲಿ ದ್ವಿತೀಯ, 80ಮೀ ಹರ್ಡಲ್ಸ್‌ನಲ್ಲಿ ತೃತೀಯ, ನಾಗರತ್ನ ಕುರಿ ಗುಂಡು ಎಸೆತದಲ್ಲಿ ದ್ವಿತಿಯ, ಪ್ರೀತಿ ಕಣವಿ 400ಮೀ ಓಟದಲ್ಲಿ ತೃತೀಯ, ಕಾವೇರಿ ಹಡಪದ 100ಮೀ ಓಟದಲ್ಲಿ ತೃತೀಯ, ಶ್ರೇಯಾ ಕಿನ್ನಾಳ 600ಮೀ ಓಟದಲ್ಲಿ ತೃತೀಯ, ಮೈಬುಸಾಬ ಗರಡಿಮನಿ ಎತ್ತರ ಜಿಗಿತದಲ್ಲಿ ತೃತೀಯ, ರಫೀಕ್ ಮಾಬುಸಾಬ ಸೊಂಡೂರ್ ಉದ್ದ ಜಿಗಿತದಲ್ಲಿ ತೃತೀಯ, 400ಮೀ ಓಟದಲ್ಲಿ ತೃತೀಯ, ನಿಂಗರಾಜ ಕಳಸಣ್ಣನವರ 600ಮೀ ಓಟದಲ್ಲಿ ದ್ವಿತೀಯ, ಕೃಷ್ಣ ಬಾರಕೇರ 80ಮೀ ಹರ್ಡಲ್ಸ್ ಓಟದಲ್ಲಿ ತೃತೀಯ ಸ್ಥಾನ ಪಡೆದಿದ್ದಾರೆ.

ಸಾಧಕ ವಿದ್ಯಾರ್ಥಿಗಳಿಗೆ ಶಾಲೆಯ ಪ್ರಧಾನ ಗುರುಗಳಾದ ವಿ.ಎಸ್ ಪಾಟೀಲ್, ಮಾರ್ಗದರ್ಶಿ ಶಿಕ್ಷಕರಾದ ಕೆ.ಆರ್ ಚೋಪದಾರ, ಹನುಮಂತಮ್ಮ, ಶಾಲೆಯ ಶಿಕ್ಷಕರು, ಎಸ್‌ಡಿಎಂಸಿಯವರು ಹಾಗೂ ಗ್ರಾಮಸ್ಥರು ಅಭಿನಂದಿಸಿದ್ದಾರೆ.

# ಹಾಲಕೆರೆ ಶ್ರೀಮಠದ ಬೆಳ್ಳಿ ರಥೋತ್ಸವ ಸಂಪನ್ನ

**■ವಿಜಯಸಾಕ್ಷಿ ಸುದ್ದಿ, ನರೇಗಲ್ಲ**

ಸಮೀಪದ ಹಾಲಕೆರೆಯ ಅನ್ನದಾನೇಶ್ವರ ಸಂಸ್ಥಾನಮಠದ ಲಿಂ. ಶ್ರೀ ಗುರು ಅನ್ನದಾನ ಮಹಾಸ್ವಾಮಿಗಳವರ 46ನೇ ಪುಣ್ಯಾರಾಧನೆ ನಿಮಿತ್ತ ಸುಮಂಗಲಿಯರು ಶ್ರೀಮಠದ ಬೆಳ್ಳಿ ರಥವನ್ನು ಎಳೆದು ಪುನೀತರಾದರು.



ಶ್ರೀಮಠದ ಪೀಠಾಧಿಪತಿ ಜ. ಶ್ರೀ ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳವರ ನೇತೃತ್ವದಲ್ಲಿ ನಾಡಿನ ವಿವಿಧ ಮಠಗಳಿಂದ ಕ್ಷೇತ್ರಕ್ಕೆ ಆಗಮಿಸಿದ್ದ ಹಿರಿಯ-ಕಿರಿಯ ಮಠಾಧಿಪತಿಗಳು ರಥಕ್ಕೆ ಪೂಜೆಯನ್ನು ಸಲ್ಲಿಸಿದರು. ಬಳಿಕ ಹರಪನಹಳ್ಳಿಯ ಶಾಸಕಿ ಎಂ.ಪಿ ಲತಾ ಮಲ್ಲಿಕಾರ್ಜುನ ಅವರು ರಥ ಎಳೆಯುವ ಕಾರ್ಯಕ್ಕೆ ಚಾಲನೆ ನೀಡಿದರು.

ರಥಬೀದಿಯಲ್ಲಿ ತೇರು ಸಾಗುತ್ತಿದಂತೆ ಸಹಸ್ರಾರು ಸಂಖ್ಯೆಯ ಭಕ್ತರು ಜಯಘೋಷಗಳನ್ನು ಕೂಗುತ್ತ ತೇರು ಎಳೆಯುತ್ತ ಹೆಜ್ಜೆ ಹಾಕಿದಾಗ, ಸರ್ವಧರ್ಮೀಯರ ಭಕ್ತಿಯ ಪರಾಕಾಷ್ಠೆ ಮುಗಿಲು ಮುಟ್ಟಿತ್ತು. ಮೆರವಣಿಗೆಯುದ್ದಕ್ಕೂ ನಾನಾ ವಿನ್ಯಾಸದ ಝಗಮಗಿಸುವ ಸೀರೆಗಳನ್ನುಟ್ಟಿದ್ದ ಸುಮಂಗಲಿಯರು ಆಕರ್ಷಕವಾಗಿ ಪೂರ್ಣಕುಂಭ ಹೊತ್ತು ಸಾಗಿದರು. ಡೊಳ್ಳು ಕುಣಿತ, ಭಜನೆ, ಸಕಲ ವಾದ್ಯ ವೈಭವದೊಂದಿಗೆ ನೆರದಿದ್ದ ಭಕ್ತಾಧಿಗಳ ನಡುವೆ ಬೆಳ್ಳಿ ರಥೋತ್ಸವವು ಜರುಗಿ-ತು. ಸದ್ಭಕ್ತರು ರಥಕ್ಕೆ ಪುಷ್ಪ ಎಸೆದು ಭಕ್ತಿಯನ್ನು ಸಮರ್ಪಿಸಿದರು.

ಗದಗ, ಕೊಪ್ಪಳ, ವಿಜಯನಗರ, ಬಳ್ಳಾರಿ, ಬಾಗಲಕೋಟ, ರಾಯಚೂರ, ದಾವಣಗೇರಿ, ಧಾರವಾಡ ಮುಂತಾದ ಊರುಗಳಿಂದ ಶ್ರೀಮಠಕ್ಕೆ ಎರಡು ದಿನಕಾಲ ಅಪಾರ ಪ್ರಮಾಣದಲ್ಲಿ ಭಕ್ತರು ತಂಡೋಪತಂಡವಾಗಿ ಕುಟುಂಬ-ಪರಿವಾರದೊಂದಿಗೆ ಆಗಮಿಸಿ ಕರ್ತೃಗದ್ದುಗೆಗೆ ನಮಿಸಿ ಶ್ರೀಗಳವರ ಆಶೀರ್ವಾದ ಪಡೆದುಕೊಂಡರು.

# ಇನ್ನರ್‌ವ್ಹೀಲ್ ಕ್ಲಬ್ ಗದಗ-ಬೆಟಗೇರಿಗೆ ಜಿಲ್ಲಾ ಚೇರಮನ್ ಭೇಟಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಇನ್ನರ್‌ವ್ಹೀಲ್ ಸಂಸ್ಥೆಯು ಈ ವರ್ಷ ಸುವರ್ಣ ಸಂಭ್ರಮಾಚರಣೆಯನ್ನು ಆಚರಿಸುತ್ತಿರುವುದು ನಮಗೆಲ್ಲಾ ಹೆಮ್ಮೆಯ ವಿಷಯ. ಇಲ್ಲಿಯವರೆಗೂ ಸದಸ್ಯರಯ ಒಗ್ಗಟ್ಟಾಗಿ ಮುನ್ನಡೆದು, ಎಲ್ಲ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದಿದ್ದಾರೆ ಎಂದು ಚೇರಮನ್ ವೈಶಾಲಿ ಲೋಖಂಡೆ ಹೇಳಿದರು.




ಅವರು ಗದಗ-ಬೆಟಗೇರಿಯ ಇನ್ನರ್‌ವ್ಹೀಲ್ ಕ್ಲಬ್‌ಗೆ ಭೇಟಿ ನೀಡಿ ಮಾತನಾಡಿದರು. ಸುವರ್ಣ ಮಹೋತ್ಸವದ ಅಂಗವಾಗಿ ಅಧ್ಯಕ್ಷೆ ರಜನಿ ಪಾಟೀಲ ಅವರಿಗೆ 'ಗೋಲ್ಡನ್ ಗರ್ಲ್' ಬ್ಯಾಡ್ಜ್ ನೀಡಿದರು.

ಜ್ಯೋತಿ ಭರಮಗೌಡರ, ಪುಷ್ಪಾ ಭಂಡಾರಿ, ಶುಭಾ ಕುಂದಗೋಳ, ಶಿಲ್ಪಾ ಅಕ್ಕಿ, ಸಾಗರಿಕಾ ಅಕ್ಕಿ, ಮೀನಾಕ್ಷಿ, ಸುನಿತಾ ಅಂಗಡಿ, ಪ್ರಿಯಾಂಕಾ ವಾಲಿ, ಶಾಂತಾ ಮುಂದಿನಮನಿ, ವಿದ್ಯಾ ಗಂಜಿಹಾಳ, ಹೇಮಾ ಪಂಗಾಲಿಯಾ ವಿವಿಧ ರಾಜ್ಯಗಳ ವೇಷಭೂಷಣ ಧರಿಸಿ ಚೇರಮನ್‌ರನ್ನು ಸ್ವಾಗತಿಸಿದರು. ಅರಣೋದಯ ಶಾಲೆಗೆ ವ್ಹೀಲ್‌ಚೇರ್ ಕೊಡುಗೆ ನೀಡಿದ ಶಾಂತಾ ಗೌಡರ ಅವರನ್ನು ಅಭಿನಂದಿಸಲಾಯಿತು. ನೂತನ ಸದಸ್ಯೆ ಪವಿತ್ರಾ ಅವರಿಂದ ಪ್ರತಿಜ್ಞಾವಿಧಿ ಸ್ವೀಕರಿಸಲಾಯಿತು. ಮಾಜಿ ಅಧ್ಯಕ್ಷರಾದ ಸರೋಜಾ ಆಲೂರ, ಶಾಂತಾ ನಿಂಬಣ್ಣವರ ಹಾಗೂ ಸದಸ್ಯರಾದ ಉಮಾ ಕವಳಿಕಾಯಿ, ಸುನಿತಾ ವಸ್ತ್ರದ, ರಶ್ಮಿ ಅಂಗಡಿ ಅವರಿಗೆ ಜನ್ಮದಿನದ ಶುಭಾಶಯ ಕೋರಲಾಯಿತು.

ವೇದಿಕೆಯ ಮೇಲೆ ಖಜಾಂಚಿ ಮೀನಾಕ್ಷಿ ಸಜ್ಜನರ, ಕಾರ್ಯದರ್ಶಿ ಹೇಮಾ ಪುಂಗಾಲಿಯಾ, ಅಧ್ಯಕ್ಷರಾದ ರಜನಿ ಪಾಟೀಲ, ಪಿಡಿಸಿ. ಪ್ರೇಮಾ ಗುಳಗೌಡರ, ಐಎಸ್‌ಓ ಶಾಂತಾ ಮುಂದಿನಮನಿ, ಎಡಿಟರ್ ಪ್ರೇಮಾ ಮೇಟಿ ಉಪಸ್ಥಿತರಿದ್ದರು. ನೀಲಾಂಬಿಕಾ ಉಗಲಾಟದ, ವಿಜಯಲಕ್ಷ್ಮೀ ಹೊಳ್ಳಿಯವರಮಠ, ಆಶಾ ಹುಕ್ಕೇರಿ, ಮಂಗಲಾ ಅಬ್ಬಿಗೇರಿ, ಸರೋಜಿನಿ ಹಕ್ಕಾಪಕ್ಕಿ, ಅನ್ನಪೂರ್ಣಾ ವರವಿ, ರೇಷ್ಮಾ ಬಸರಿಗಿಡದ, ಸುಲೋಚನಾ ಐಹೊಳ್ಳಿ, ವೀಣಾ ತಿರ್ಲಾಪೂರ, ನಾಗರತ್ನಾ ಪಾಟೀಲ, ಸುವರ್ಣಾ ವಸ್ತ್ರದ, ಅಶ್ವಿನಿ ಜಗತಾಪ, ಜಯಶ್ರೀ ಉಗಲಾಟ, ಸುಶೀಲಾ ಕೋಟಿ, ಲಲಿತಾ ಉಮನಾಬಾದಿ, ಶಿವಲೀಲಾ ಅಕ್ಕಿ ಪಾಲ್ಗೊಂಡಿದ್ದರು. ಶ್ರೇಯಾ ಪವಾಡಶೆಟ್ಟರ ಪ್ರಾರ್ಥಿಸಿದರು. ರಜನಿ ಪಾಟೀಲ ಸ್ವಾಗತಿಸಿದರು. ಡಾ.ನಾಗರತ್ನಾ ಕಲ್ಲೋಳಗಿ, ಕಸ್ತೂರಿ ಹಿರೇಗೌಡರ ನಿರೂಪಿಸಿದರು. ಪೊಂಗಾಲಿಯಾ ವಂದಿಸಿದರು.

# ಶರಣರ ವಚನ ಚಿಂತನೆಗಳು ಭೂಲೋಕದ ಅಮೃತ ಫಲಗಳು

**■ವಿಜಯಸಾಕ್ಷಿ ಸುದ್ದಿ, ಗದಗ**

ಶ್ರವಣ ಎಂದರೆ ನಮ್ಮ ಅಂತರಂಗದ ಪರಿಶುದ್ಧವಾದ ಮನಸ್ಸಿನಿಂದ ಪವಿತ್ರವಾದ ಸಂಗತಿಗಳನ್ನು ಮತ್ತು ಉತ್ತಮವಾದ ಸಂದೇಶಗಳನ್ನು ಕೇಳುವುದು. ಈ ಹಿನ್ನೆಲೆಯಲ್ಲಿ ಬಸವಾದಿ ಶರಣ-ಶರಣೆಯರ ವಚನಗಳು ಈ ಭೂಲೋಕದ ಅಮೃತ ಫಲಗಳಾಗಿ ಎಲ್ಲೆಡೆಯೂ ವಚನದ ಮೂಲಕ ತನ್ನ ಪರಿಮಳವನ್ನು ಬೀರುತ್ತಿವೆ ಎಂದು ಶರಣೆ ರೇಖಾ ಕರಬಸಪ್ಪ ಬಾಳಿಕಾಯಿ ಹೇಳಿದರು.



ಅವರು ಅಮರೇಶ್ವರ ನಗರದ ಶಾರದಾ ಬೊಮ್ಮಸಾಗರ ಅವರ ನಿವಾಸದಲ್ಲಿ ನಡೆದ ವಚನ ಶ್ರಾವಣ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದರು. ಶರಣ ಬಿ.ಬಿ ಪಾಟೀಲ ಮಾತನಾಡಿ, ನಮ್ಮ ಕನ್ನಡ ನಾಡಿನಲ್ಲಿ ಬಹು ದೊಡ್ಡ ಗುರು ಪರಂಪರೆಯನ್ನು ಹೊಂದಿರುವ ಮಠಗಳನ್ನು ಕಾಣುತ್ತೇವೆ. ಸಮಾಜದಲ್ಲಿ ಜನರು ಆದರ್ಶ ವ್ಯಕ್ತಿಗಳಾಗಬೇಕು, ಬದುಕನ್ನು ಹಸನಾಗಿಸಬೇಕು ಎನ್ನುವುದು ಮಠಗಳ ಉದ್ದೇಶವಾಗಿದೆ ಎಂದರು.

ಶರಣ ಸಾಹಿತ್ಯ ಪರಿಷತ್ತಿನ ಕುರಿತು ಶರಣ ಪ್ರಕಾಶ ಅಸುಂಡಿ ಮಾತನಾಡಿದರು. ಹಿರಿಯ ಸಾಹಿತಿಗಳು ಹಾಗೂ ಮಾರ್ಗದರ್ಶಕರಾದ ಪ್ರೊ. ಸಿ.ವಿ ಕೆರೆಮನಿ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಸಭೆಯಲ್ಲಿ ಸಂಗನಗೌಡ ಪಾಟೀಲ, ರೇಣುಕಾ ಪಾಟೀಲ, ಶಿವಣ್ಣ ಮುಗದ, ರಾಮಣ್ಣ ಕಳ್ಳಿಮನಿ, ಕೆ.ವಿ ಗೋಣಿ, ಎಸ್.ಎನ್ ಹಕಾರಿ, ಗಂಗಮ್ಮ ಹೂಗಾರ, ಮಂಜುನಾಥ ಲಾಲಗೊಂಡ, ಅಶೋಕ ಬರಗುಂಡಿ, ವಿ.ಕೆ ಕರಿಗೌಡ್ರು, ಪ್ರಕಾಶ್ ಅಸುಂಡಿ, ಡಾ. ರಾಜಶೇಖರ ದಾನರೆಡ್ಡಿ, ಬಸವರಾಜ ವಾರಿ, ಗೌರಕ್ಕ ಬಡಿಗಣ್ಣವರ, ಶಾರದಾ ಬೊಮ್ಮಸಾಗರ, ಆರ್.ವಿ ಹಿರೇಮಠ, ಜಿ. ಜಯಲಕ್ಷ್ಮೀ, ಸುವರ್ಣ ಹೊಸಂಗಡಿ, ನಾಗಭೂಷಣ ಬಡಿಗಣ್ಣವರ, ಕೆ.ಎಸ. ಬಾಳಿಕಾಯಿ, ಗುರುನಾಥ ಹೊಸಮನಿ, ಪುಷ್ಪಲತಾ ಬಡಿಗಣ್ಣವರ, ಜಿ.ವಿ ಹೂಗಾರ, ಸಿ.ಆರ್ ಗಡಾದ ಮುಂತಾದವರಿದ್ದರು. ಶಾರದಾ ಬೊಮ್ಮಸಾಗರ ಸ್ವಾಗತಿಸಿದರು. ಶಿವಣ್ಣ ಮುಗದ ನಿರೂಪಿಸಿದರು.

# ರಂಭಾಪುರಿ ಪೀಠದಲ್ಲಿ ಪ್ರತಿಭಾ ಕಾರಂಜಿ ಇಂದು

**■ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು**

2023-24ನೇ ಸಾಲಿನ ಕ್ಲಸ್ಟರ್ ಮಟ್ಟದ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳ 'ಪ್ರತಿಭಾ ಕಾರಂಜಿ'ಯನ್ನು ಶುಕ್ರವಾರ ಬೆಳಿಗ್ಗೆ 9ಕ್ಕೆ ಶ್ರೀ ಜಗದ್ಗುರು ರಂಭಾಪುರಿ ಮಹಾ ಪೀಠದ ಶ್ರೀ ವೀರಭದ್ರಸ್ವಾಮಿ ವಸತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಲಾಗಿದೆ.

ಜಿಲ್ಲಾ ಪಂಚಾಯತಿ ಚಿಕ್ಕಮಗಳೂರು, ತಾಲೂಕು ಪಂಚಾಯತಿ ನರಸಿಂಹರಾಜಪುರ, ಗ್ರಾಮ ಪಂಚಾಯತಿ ಬಿ.ಕಣಬೂರು ಮತ್ತು ಮಾಗುಂಡಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ಕೇಂದ್ರ, ತಾಲ್ಲೂಕು ಪ್ರಾಥಮಿಕ ಶಿಕ್ಷಕರ ಸಂಘ ನರಸಿಂಹರಾಜಪುರ ತಾಲೂಕ, ಸಮೂಹ ಸಂಪನ್ಮೂಲ ಕೇಂದ್ರ ಬಾಳೆಹೊನ್ನೂರು ಇವರ ವತಿಯಿಂದ ಈ ಕಾರ್ಯಕ್ರಮ ಜರುಗಲಿದೆ. ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ(ರಿ) ಆಡಳಿತ ಮಂಡಳಿ, ಶ್ರೀ ರಂಭಾಪುರಿ ಪೀಠದ ಶ್ರೀ ವೀರಭದ್ರಸ್ವಾಮಿ ವಸತಿ ಹಿರಿಯ ಪ್ರಾಥಮಿಕ ಶಾಲೆ ಮತ್ತು ಶ್ರೀ ಜಗದ್ಗುರು ರುದ್ರಮುನೀಶ್ವರ ವಸತಿ ಪ್ರೌಢಶಾಲೆಯವರು ಕೋರಿದ್ದಾರೆ.


## ನೀವೂ ನಮ್ಮ ಜೊತೆ ಕೈಜೋಡಿಸಿ

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545



ಲಕ್ಷ್ಮೇಶ್ವರ ತಾಲೂಕಿನ ಶಿಗ್ಲಿ ಗ್ರಾಮದ ಸರಕಾರಿ ಮಾದರಿ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಗ್ರೂಪ್ ಮಟ್ಟದ ಕ್ರೀಡಾಕೂಟದಲ್ಲಿ ಸಾಧನೆ ಮಾಡಿದ್ದಾರೆ. ಅಮಿತ ಕುಮಾರ ಸರದಾರ 400 ಮೀಟರ್ ಓಟ, ಎತ್ತರ, ಉದ್ದ ಜಿಗಿತದಲ್ಲಿ ಪ್ರಥಮ ಸ್ಥಾನಗಳಿಸಿದ್ದಾನೆ. ಹಾಗೂ 100 ಮೀಟರ್ ಓಟ ಎತ್ತರ ಉದ್ದ ಜಿಗಿತದಲ್ಲಿ ಅಂಕಿತ್ ಕುಮಾರ ಸರದಾರ ಪ್ರಥಮ ಸ್ಥಾನ ಗಳಿಸಿದ್ದಾನೆ. ಇದಕ್ಕೆ ಶಾಲೆಯ ಗುರುಬಳಗ ಹಾಗೂ ಎಸ್ ಡಿ ಎಂ ಸಿ ಅದ್ಯಕ್ಷರು ಸರ್ವ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ.



ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಲಕ್ಷ್ಮೇಶ್ವರ ಶಾಖೆ ವತಿಯಿಂದ ಪಟ್ಟಣದ ಆರಕ್ಷಕರಿಗೆ, ವೈದ್ಯರಿಗೆ, ಘಟಕ ವ್ಯವಸ್ಥಾಪಕರು, ಬಸ್ ಚಾಲಕರು ಹಾಗೂ ನಿರ್ವಾಹಕರಿಗೆ ರಕ್ಷಾ ಬಂಧನದ ನಿಮಿತ್ತವಗಿ ರಾಖಿ ಕಟ್ಟಲಾಯಿತು. ಈ ಸಂದರ್ಭದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ರಾಜ್ಯ ಕಾರ್ಯಕಾರಿಣಿ ಸದಸ್ಯ ಅಭಿಷೇಕ ದೊಡ್ಡಮನಿ, ತಾಲೂಕು ಸಂಚಾಲಕ ಮಾಲತೇಶ ಮಣಕವಾಡ, ಶರಣಪ್ಪ ಶಿವನಗೌಡ್ರ, ಚೇತನ ಯಲಿಗಾರ, ಸಂಜನಾ ಪಾಟೀಲ, ಮಹಾದೇವಿ, ತೇಜಸ್ವಿನಿ ತಮ್ಮಣ್ಣನವರ, ಚಂದ್ರು ಕುಂದಗೋಳ, ಸಾಗರ ಮೆಹರವಾಡೆ ಹಾಗೂ ಕೃಷ್ಣ ಕಳಸೂರ ಇದ್ದರು.

ಶ್ರಾವಣ ತಪೋನುಷ್ಠಾನ, ಹುಣ್ಣಿಮೆ ಧರ್ಮ ಸಮಾರಂಭದಲ್ಲಿ ರಂಭಾಪುರಿ ಶ್ರೀಗಳು

# ಕೆಲಸವಿಲ್ಲದ ಮನುಷ್ಯನಲ್ಲಿ ಕೆಟ್ಟ ವಿಚಾರಗಳು ಹುಟ್ಟುತ್ತವೆ

■ ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು

ಬಾಳಿನ ನಿಜವಾದ ಸಂಪತ್ತು ಸಂಸ್ಕಾರ. ಸಂಸ್ಕಾರ-ಸಂಸ್ಕೃತಿಯಿಲ್ಲದ ಮಾನವ ಜೀವನ ವ್ಯರ್ಥ. ಮಾನವೀಯತೆಯಿಂದ ದೈವತ್ವಕ್ಕೆ ಕರೆದೊಯ್ಯುವ ಮಾರ್ಗವೇ ಸಂಸ್ಕೃತಿ. ಮನುಷ್ಯನ ಬದುಕನ್ನು ಪರಿಶುದ್ಧಗೊಳಿಸುವುದೇ ಸತ್ಪುರುಷರ ಗುರಿಯಾಗಿದೆ ಎಂದು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಗುರುವಾರ ಶ್ರೀ ಜಗದ್ಗುರು ರಂಭಾಪುರಿ ಪೀಠದಲ್ಲಿ ಜರುಗಿದ ಶ್ರಾವಣ ಪೂಜಾ ತಪೋನುಷ್ಠಾನ ಹಾಗೂ ಹುಣ್ಣಿಮೆ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಜೀವನ ಸುಖ-ದುಃಖಗಳ ಸಂಕಲನ. ಸುಖ ದುಃಖಗಳನ್ನು ಸಮಾನವಾಗಿ ಕಂಡು ನಡೆಯುವ ವ್ಯಕ್ತಿ ಜೀವನದಲ್ಲಿ ಶ್ರೇಯಸ್ಸನ್ನು ಕಾಣಬಲ್ಲ. ಒಡಕಿನಿಂದ ಧರ್ಮ ಸುಖ, ಶಾಂತಿ ಮತ್ತು ಗೌರವಗಳು ಮಣ್ಣು ಪಾಲಾಗುವವು. ಆದರ್ಶ ವಿಚಾರಗಳನ್ನು ಅಳವಡಿಸಿಕೊಂಡು ಬಾಳಲು ಸತ್ಪುರುಷರ ಮಾರ್ಗದರ್ಶನ ಅವಶ್ಯಕವಾಗಿದೆ. ಮನುಷ್ಯ ಲೌಕಿಕ ಮತ್ತು ಪಾರಮಾರ್ಥಿಕಗಳೆರಡನ್ನು ಅನುಸರಿಸಿ ಬಾಳಬೇಕಾಗುತ್ತದೆ. ಇವುಗಳನ್ನು ಅರಿತು ಬಾಳಲೆಂದೇ ಧರ್ಮ, ದೇವರು ಮತ್ತು ಗುರು ಮಾರ್ಗದರ್ಶನ ಮನುಷ್ಯನ ಜೀವನದಲ್ಲಿ ಹೊಸ ಬೆಳಕು ಮೂಡಿಸುತ್ತದೆ ಎಂದು ಶ್ರೀ ಜಗದ್ಗುರು ರೇಣುಕಾಚಾರ್ಯರ ರೇಣುಕ ಗೀತೆಯಲ್ಲಿ ಬೋಧಿಸಿದ್ದಾರೆ ಎಂದರು.



ಇದೇ ಸಂದರ್ಭದಲ್ಲಿ ಕೂಡ್ಲಿಗಿ ತಾಲೂಕಿನ ಆಲೂರು ಹಿರೇಮಠದಿಂದ ಮುದ್ರಣಗೊಂಡ 'ಶ್ರೀ ಉಜ್ಜಯಿನಿ ಜಗದ್ಗುರು ಮರುಳಸಿದ್ಧೇಶ್ವರ ಲೀಲಾಮೃತ' ಕೃತಿಯನ್ನು ಶ್ರೀ ರಂಭಾಪುರಿ ಜಗದ್ಗುರುಗಳು ಬಿಡುಗಡೆಗೊಳಿಸಿದರು.

ಶ್ರೀ ಜಗದ್ಗುರು ರೇಣುಕ ವಿಜಯ ಪುರಾಣ ಪ್ರವಚನ ಮಾಡಿದ ಮಾದನ ಹಿಪ್ಪರಗಿ ಶಾಂತವೀರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ, ಮನುಷ್ಯನಿಗೆ ಎಷ್ಟು ಗಳಿಸಿದರೂ ತೃಪ್ತಿಯಿರುವುದಿಲ್ಲ. ಮನುಷ್ಯನಿಗೆ ಸಂಪತ್ತಿನಿಂದ ಶಾಂತಿ ಸಿಗುವುದಿಲ್ಲ. ಅಧಿಕಾರ ಅಂತಸ್ತಿನಿಂದ ಸಂತೃಪ್ತಿ ಸಿಗುವುದಿಲ್ಲ. ಆಚಾರ್ಯರ ಋಷಿಮುನಿಗಳ ಮೌಲ್ಯ ತುಂಬಿದ ಮಾತುಗಳು ಬದುಕಿಗೆ ಉನ್ನತಿಯನ್ನು ತಂದು ಕೊಡಬಲ್ಲವು. ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಶ್ವ ಬಂಧುತ್ವ, ಶಾಂತಿ ಸಂದೇಶ ಸಾಮರಸ್ಯ ಬದುಕಿಗೆ ಬಹು ದೊಡ್ಡ ಶಕ್ತಿ ಎಂದರು.

> ಮನುಷ್ಯ ಆಸ್ತಿ ಅಧಿಕಾರ ಕಳೆದುಕೊಂಡಾಗ ಬಡವನಾಗುವುದಿಲ್ಲ. ಆದರೆ ಆತ್ಮೀಯರನ್ನು ಕಳೆದುಕೊಂಡಾಗ ಬಡವನಾಗುತ್ತಾನೆ. ನಿಂತ ನೀರಿನಲ್ಲಿ ಕ್ರಿಮಿಗಳು ಹುಟ್ಟುವಂತೆ ಕೆಲಸವಿಲ್ಲದ ಮನುಷ್ಯನಲ್ಲಿ ಕೆಟ್ಟ ವಿಚಾರಗಳು ಹುಟ್ಟುತ್ತವೆ. ಸತ್ಯ ಶುದ್ಧ ಧರ್ಮ ದಾರಿಯಲ್ಲಿ ನಡೆದರೆ ಬಾಳು ಉಜ್ವಲಗೊಳ್ಳುವುದು.
>
> – ಶ್ರೀ ಡಾ. ವೀರಸೋಮೇಶ್ವರ ಜಗದ್ಗುರುಗಳು.
> ಶ್ರೀ ರಂಭಾಪುರಿ ಪೀಠ, ಬಾಳೆಹೊನ್ನೂರು.

ಈ ಪವಿತ್ರ ಸಮಾರಂಭದಲ್ಲಿ ದೇವರಭೂಪುರದ ಅಭಿನವ ಗಜದಂಡ ಶಿವಾಚಾರ್ಯರು, ಬೀರೂರಿನ ರುದ್ರಮುನಿ ಶಿವಾಚಾರ್ಯರು, ಮಾದಿಹಳ್ಳಿ ಚನ್ನಮಲ್ಲಿಕಾರ್ಜುನ ಶಿವಾಚಾರ್ಯರು ಪಾಲ್ಗೊಂಡು ನುಡಿನಮನ ಸಲ್ಲಿಸಿದರು. ದೇವರ ಹಿಪ್ಪರಗಿ ಸದಯ್ಯನಮಠದ ಶ್ರೀಗಳು, ಕೂಡ್ಲಿಗಿ ತಾಲೂಕ ಆಲೂರು ನಿರಂಜನ ದೇವರು, ಸಿದ್ಧಲಿಂಗಯ್ಯಸ್ವಾಮಿ, ಬುಕ್ಕಾಂಬುಧಿ ಎಸ್.ಎಂ ವೀರಭದ್ರಪ್ಪ, ಲಿಂಗಸುಗೂರಿನ ಶಿವಕುಮಾರ ನಂದಿಕೋಲಮಠ, ಆಸಂದಿ ರುದ್ರಯ್ಯನವರು, ಬಾಬುಗೌಡ ವದ್ದಲ ಮೊದಲಾದ ಗಣ್ಯರು ಪಾಲ್ಗೊಂಡು ಶ್ರೀ ರಂಭಾಪುರಿ ಜಗದ್ಗುರುಗಳಿಂದ ಗುರುರಕ್ಷೆ ಸ್ವೀಕರಿಸಿದರು.

ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ ಸಾಧಕರಿಂದ ವೇದಘೋಷ, ಗಂಗಾಧರ ಹಿರೇಮಠ ಇವರಿಂದ ಭಕ್ತಿ ಗೀತೆ ಜರುಗಿತು. ಶಿಕ್ಷಕ ವೀರೇಶ ಕುಲಕರ್ಣಿ ನಿರೂಪಿಸಿದರು. ಪ್ರಾತಃಕಾಲ ಶ್ರೀ ಪೀಠದ ಎಲ್ಲ ದೈವಗಳಿಗೆ ವಿಶೇಷ ಪೂಜೆಗಳು ಜರುಗಿದವು.

## ನುಲಿಯ ಚಂದಯ್ಯನವರ ಸಂದೇಶಗಳು ಸಾರ್ವಕಾಲಿಕ

▶▶ ಮೊದಲನೇ ಪುಟದಿಂದ

ವಚನಗಳನ್ನು ಸವಿಸ್ತಾರವಾಗಿ ವಿವರಿಸಿದರು.

ಮಾರುತಿ ಕಟ್ಟಿಮನಿ ರಕ್ಷಾ ಬಂಧನದ ಮಹತ್ವದ ಕುರಿತು ವಿವರಿಸುತ್ತ, ನೂಲು ಹುಣ್ಣಿಮೆಯ ದಿನದಂದು ಕಾಯಕ ಯೋಗಿ, ಶರಣರಾದ ನುಲಿಯ ಚಂದಯ್ಯನವರ ಜಯಂತಿ ಆಚರಿಸಲಾಗುತ್ತದೆ. ಅವರು ಸಮಾಜದಲ್ಲಿ ಎಲ್ಲರೂ ಸಾಮರಸ್ಯದಿಂದ ಜೀವನ ನಡೆಸುವ ಕುರಿತು ಸಂದೇಶ ಸಾರಿದರು ಎಂದರು.

ಇದೇ ಸಂದರ್ಭದಲ್ಲಿ ಸಾಮೂಹಿಕ ರಕ್ಷಾ ಬಂಧನ ಕಾರ್ಯಕ್ರಮವು ಜರುಗಿತು. ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ, ಮೋಹನ ಭಜಂತ್ರಿ, ವೈ.ಸಿ ಗಡಾದ, ಸುರೇಶ ಕಟ್ಟಿಮನಿ, ಎಸ್.ಎನ್ ಬಳ್ಳಾರಿ, ರಾಜು ಭಜಂತ್ರಿ, ಹುಲ್ಲೇಶ ಭಜಂತ್ರಿ, ಗೀತಾ ಭಜಂತ್ರಿ, ಎಚ್.ವಿ ವೀರಾಪುರ, ಮಾರುತಿ ಅಂಗಡಿ, ಹುಚ್ಚಪ್ಪ ಅಂಗಡಿ ಸೇರಿದಂತೆ ಸಮಾಜದ ಮುಖಂಡರು, ಗಣ್ಯರು, ಹಿರಿಯರು ಹಾಜರಿದ್ದರು.

ನಾಡಗೀತೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಬಾಹುಬಲಿ ಜೈನರ್ ಸರ್ವರನ್ನೂ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

## ಉಜ್ವಲ ಭವಿಷ್ಯದತ್ತ ಗಮನವಿಡಿ

▶▶ ಮೊದಲನೇ ಪುಟದಿಂದ

ಪರೀಕ್ಷಿಸಿ, ಆಹಾರದ ಬಗ್ಗೆ ವಿದ್ಯಾರ್ಥಿಗಳಿಂದ ಮಾಹಿತಿ ಪಡೆದುಕೊಂಡು, ಮೇಲ್ವಿಚಾರಕರ ಕರ್ತವ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ಥಳದಲ್ಲಿದ್ದ ಪಿಎಸ್ಐ ಎಲ್.ಕೆ ಜೂಲಕಟ್ಟಿಯವರಲ್ಲಿ, ಸೆಪ್ಟೆಂಬರ್ ತಿಂಗಳಲ್ಲಿ ಈ ವಸತಿ ನಿಲಯದಲ್ಲಿ ಸೆಮಿನಾರ್ ಏರ್ಪಡಿಸಿ, ಸ್ವತಃ ನಾನೇ ಬಂದು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತೇನೆ ಎಂದರು. ಈ ಸಂದರ್ಭದಲ್ಲಿ ವಸತಿ ನಿಲಯದ ಮೇಲ್ವಿಚಾರಕರಾದ ಎ.ಡಿ ನದಾಫ್, ಎಸ್.ವಿ ಅಡಗತ್ತಿ, ಎಂ.ಎಂ ಪಾಪಣ್ಣವರ, ಸಂತೋಷ ಪೂಜಾರ ಉಪಸ್ಥಿತರಿದ್ದರು.

## ಸಮಾಜ ಸುಧಾರಣೆಯಲ್ಲಿ ಬ್ರಹ್ಮಶ್ರೀ ನಾರಾಯಣರ ಕೊಡುಗೆ ಅಪಾರ

▶▶ ಮೊದಲನೇ ಪುಟದಿಂದ

ಪ್ರಥಮದರ್ಜೆ ಮಹಿಳಾ ಕಾಲೇಜಿನ ಪ್ರಾಧ್ಯಾಪಕ ಪ್ರೊ. ಸಿದ್ಧಲಿಂಗೇಶ ಸಜ್ಜನಶೆಟ್ಟರ್ ಬ್ರಹ್ಮಶ್ರೀ ನಾರಾಯಣ ಗುರುಗಳ ಜೀವನ ಮತ್ತು ಸಂದೇಶ ಕುರಿತು ಉಪನ್ಯಾಸ ನೀಡಿ ಮಾತನಾಡುತ್ತಾ, ಬ್ರಹ್ಮಶ್ರೀ ಗುರುಗಳು ಸಮಾಜದಲ್ಲಿನ ಮೌಢ್ಯ, ಕಂದಾಚಾರಗಳನ್ನು ಹೋಗಲಾಡಿಸಿ ಎಲ್ಲ ವರ್ಗದ ಜನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಿದವರಾಗಿದ್ದಾರೆ. ದುಂದುವೆಚ್ಚಗಳಿಗೆ ಕಡಿವಾಣ ಹಾಕಿ ಶಿಕ್ಷಣಕ್ಕೆ ಮಹತ್ವ ಕೊಡುವುದು ಅವರ ಮುಖ್ಯ ಉದ್ದೇಶವಾಗಿತ್ತು. ಕೇರಳದ ತಿರುವನಂತಪುರದ ಒಂದು ಗ್ರಾಮದಲ್ಲಿ ಇವರು 1854ರಲ್ಲಿ ಹುಟ್ಟಿದರು. ಬೆಳೆವ ಸಿರಿ ಮೊಳಕೆಯಲ್ಲೇ ಎನ್ನುವ ಹಾಗೆ ಬಾಲ್ಯದಲ್ಲಿಯೇ ಸಮಾಜದಲ್ಲಿರುವ ಅಸಮಾನತೆ, ಬಡವ-ಶ್ರೀಮಂತರ ನಡುವಿನ ವ್ಯತ್ಯಾಸದ ಕುರಿತು ಯೋಚಿಸುತ್ತಿದ್ದರು ಎಂದು ವಿವರಿಸಿದರು.

ಪ್ರಕಾಶ ಬೊಮ್ಮನಹಳ್ಳಿಯವರು ಪ್ರಾಸ್ತಾವಿಕವಾಗಿ ಮಾತನಾಡಿ, ಬ್ರಹ್ಮಶ್ರೀ ನಾರಾಯಣ ಗುರುಗಳ ಸಂದೇಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಬಿ ಸ್ವಾಗತಿಸಿ, ವಂದಿಸಿದರು.

ಕಾರ್ಯಕ್ರಮದಲ್ಲಿ ಆಂಜಪ್ಪ ಹುಲಕೋಟಿ, ಪರಶುರಾಮ ಈಳಗೇರ, ಫಕೀರಪ್ಪ ಈಳಗೇರ, ಶಂಕ್ರಪ್ಪ ಈಳಗೇರ, ಈಶಪ್ಪ ಈಳಗೇರ, ಜಯಶ್ರೀ ಹೊಸಪೇಟಿ, ಹನಮಂತಪ್ಪ ಈಳಗೇರ, ಶಂಕರ್ ಹಾನಗಲ್, ಶಿವಮೂರ್ತೆಪ್ಪ ಈಳಗೇರ ಸೇರಿದಂತೆ ಸಮಾಜದ ಮುಖಂಡರು, ಗಣ್ಯರು, ಹಿರಿಯರು ಹಾಜರಿದ್ದರು.

## ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಅರಿಷಿಣಗೋಡಿ ಶಾಲೆಯ ಸಾಧನೆ

■ ವಿಜಯಸಾಕ್ಷಿ ಸುದ್ದಿ, ನರಗುಂದ

ಇಲ್ಲಿನ ತಾಲೂಕಾ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪ್ರೌಢಶಾಲಾ ವಿದ್ಯಾರ್ಥಿಗಳ ಕ್ಲಸ್ಟರ್ ಮಟ್ಟದ ಕ್ರೀಡಾಕೂಟದಲ್ಲಿ ಅರಿಷಿಣಗೋಡಿ ಗ್ರಾಮದ ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳು ಥ್ರೋಬಾಲ್‌ನಲ್ಲಿ ಪ್ರಥಮ ಸ್ಥಾನ ಹಾಗೂ ವೈಯಕ್ತಿಕ ಕ್ರೀಡೆಗಳಲ್ಲಿ ಸಾಧನೆ ಮೆರೆದಿದ್ದಾರೆ.



ವಿದ್ಯಾರ್ಥಿನಿಯರ ವಿಭಾಗದಲ್ಲಿ ಗುಂಡು ಎಸೆತ ದೇವಕ್ಕ ಕಲಾರಿ ಪ್ರಥಮ, ಶಿಲ್ಪಾ ನಾಯ್ಕರ ತೃತೀಯ, ಚಕ್ರ ಎಸೆತದಲ್ಲಿ ಶಿಲ್ಪಾ ನಾಯ್ಕರ ಪ್ರಥಮ, ದೇವಕ್ಕ ಕಲಾರಿ ತೃತೀಯ, ಹ್ಯಾಮರ್ ಎಸೆತದಲ್ಲಿ ಶಿಲ್ಪಾ ನಾಯ್ಕರ ಪ್ರಥಮ, ಬಲ್ಲೆ ಎಸೆತದಲ್ಲಿ ವೈಶಾಲ್ಯ ನೀಲರಡ್ಡಿ ಪ್ರಥಮ, 1500ಮೀ ಓಟದಲ್ಲಿ ಪ್ರಿಯಾಂಕಾ ಪಾಟೀಲ ತೃತೀಯ ಸ್ಥಾನ ಪಡೆದಿದ್ದಾರೆ.

ಬಾಲಕರ ವಿಭಾಗದಲ್ಲಿ 4*100 ರಿಲೇ ದ್ವಿತೀಯ, ಹ್ಯಾಮರ್ ಎಸೆತದಲ್ಲಿ ಹರೀಶ್ ಕಿತ್ತೂರ ದ್ವಿತೀಯ, ಚಕ್ರ ಎಸೆತದಲ್ಲಿ ಹನಮಂತ ತಳವಾರ ಪ್ರಥಮ, ಬಲ್ಲೆ ಎಸೆತದಲ್ಲಿ ಹನಮಂತ ತಳವಾರ ದ್ವಿತೀಯ, 100ಮೀ ಓಟದಲ್ಲಿ ಮೋಹನ್ ರಂಕಲಕೊಪ್ಪ ತೃತೀಯ, 200ಮೀ ಓಟದಲ್ಲಿ ರವಿ ದನ್ನೂರ ತೃತೀಯ, 400ಮೀ ಓಟದಲ್ಲಿ ಮೋಹನ ರಂಕಲಕೊಪ್ಪ ದ್ವಿತೀಯ, 1500ಮೀ ಓಟದಲ್ಲಿ ಮಹೇಶ ರಂಕಲಕೊಪ್ಪ ಪ್ರಥಮ, 3000ಮೀ ಓಟದಲ್ಲಿ ಹನಮಂತ ಗಡ್ಡಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ವಿಜೇತ ವಿದ್ಯಾರ್ಥಿಗಳಿಗೆ ಗ್ರಾ.ಪಂ ಅಧ್ಯಕ್ಷೆ ಅಶ್ವಿನಿ ಚಿಕ್ಕಯ್ಯ ಹಿರೇಮಠ, ಎಸ್‌ಡಿಎಂಸಿ ಅಧ್ಯಕ್ಷ ಬಸಪ್ಪ ದೊಡಮನಿ, ಮುಖ್ಯೋಪಾಧ್ಯಾಯರು ಮತ್ತು ದೈಹಿಕ ಶಿಕ್ಷಣ ಶಿಕ್ಷಕ ಎಸ್.ಕೆ ಗೊಡಚಿನಮಲ್ಕಿ, ಸಂತೋಷ ಕನವಳ್ಳಿ, ಪ್ರಶಾಂತ ಹಿರೇಮಠ, ನಾಗಪ್ಪ ಗೊರಾಬಾಳ, ಮಾರುತಿ ಗೊರಾಬಾಳ, ಭೀಮಪ್ಪ ತಳವಾರ, ರಂಗಪ್ಪ ತಳವಾರ, ಮಾರುತಿ ಸುರೇಬಾನ, ಕ್ರೀಡಾಭಿಮಾನಿಗಳು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

## ಇಂದು ತಾಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದ ಉದ್ಘಾಟನೆ

▶▶ ಮೊದಲನೇ ಪುಟದಿಂದ

ಎಸ್.ವಿ.ಸಂಕನೂರ, ಪ್ರದೀಪ್ ಶೆಟ್ಟರ್, ಗದಗ ಬೆಟಗೇರಿ ನಗರ ಸಭೆ ಅಧ್ಯಕ್ಷೆ ಉಷಾ ದಾಸರ, ಉಪಾಧ್ಯಕ್ಷೆ ಸುನಂದಾ ಬಾಕಳೆ, ಸೊರಟೂರ ಗ್ರಾಮ ಪಂಚಾಯತ ಅಧ್ಯಕ್ಷೆ ಜಯಶ್ರೀ ಬಂಕಾಪುರ, ಉಪಾಧ್ಯಕ್ಷ ಮೇಲಗಿರಿಗೌಡ ಪಾಟೀಲ, ಕಾಲೇಜು ಅಭಿವೃದ್ಧಿ ಸಮಿತಿಯ ಕಾರ್ಯಾಧ್ಯಕ್ಷ ಡಾ.ವ್ಹಿ.ಬಿ.ಇನಾಮದಾರ, ಶಾಲಾ ಶಿಕ್ಷಣ ಇಲಾಖೆಯ(ಪದವಿ ಪೂರ್ವ) ನಿರ್ದೇಶಕಿ ಸಿಂಧೂ.ಬಿ.ರೂಪೇಶ, ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಜಿ.ಎನ್. ಕುರ್ತಕೋಟಿ, ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ.ರಡ್ಡೇರ, ಜಿ.ಎಲ್.ಬಾರಟಕ್ಕೆ, ಗ್ರಾಮೀಣ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ವ್ಹಿ.ವ್ಹಿ.ನಡುವಿನಮನಿ, ಶಹರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್.ಬುರಡಿ, ಅತಿಥಿಗಳಾಗಿ ಪ್ರಾಚಾರ್ಯರ ಸಂಘದ ಅಧ್ಯಕ್ಷ ಎಚ್.ಸಿ.ಕಟ್ಟಿಮನಿ, ಉಪನ್ಯಾಸಕರ ಸಂಘದ ಜಿಲ್ಲಾ ಅಧ್ಯಕ್ಷ ಎಸ್. ಎಸ್. ಸೋಮಣ್ಣವರ, ತಾಲೂಕು ಉಪನ್ಯಾಸಕರ ಸಂಘದ ಅಧ್ಯಕ್ಷ ಬಿ.ಎಸ್. ಮಲ್ಲಾಪೂರ, ಜಿಲ್ಲಾ ಕ್ರೀಡಾ ಸಂಚಾಲಕ ರಮೇಶ ಗಂಗಾಪುತ್ರ, ಸರ್ಕಾರಿ ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ಎಸ್. ಎ.ಅವಾರಿ ಆಗಮಿಸಲಿದ್ದಾರೆ.

## ದಲಿತ ವಿದ್ಯಾರ್ಥಿ ಪರಿಷತ್‌ಗೆ ಗುಡದಪ್ಪ ತಳಗೇರಿ ನೇಮಕ

■ ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕ ರಾಜ್ಯ ದಲಿತ ವಿದ್ಯಾರ್ಥಿ ಪರಿಷತ್ ಬೆಳಗಾವಿ ವಿಭಾಗೀಯ ಸಂಚಾಲಕ ಸುರೇಶ ವಾಯ್.ಚಲವಾದಿ ಅವರ ಆದೇಶದ ಮೇರೆಗೆ ಕರ್ನಾಟಕ ರಾಜ್ಯ ದಲಿತ ವಿದ್ಯಾರ್ಥಿ ಪರಿಷತ್ ಗದಗ ಜಿಲ್ಲಾ ಸಂಪರ್ಕ ಕಾರ್ಯದರ್ಶಿಯಾಗಿ ಜಿಲ್ಲೆಯ ಡಂಬಳ ಗ್ರಾಮದ ಗುಡದಪ್ಪ ಕೆ.ತಳಗೇರಿ ಇವರನ್ನು ನೇಮಕ ಮಾಡಲಾಗಿದೆ ಎಂದು ಕರ್ನಾಟಕ ರಾಜ್ಯ ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಉಪಾಧ್ಯಕ್ಷ ಲಕ್ಷ್ಮಣ ಪೂಜಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕರ್ನಾಟಕ ರಾಜ್ಯ ದಲಿತ ವಿದ್ಯಾರ್ಥಿ ಪರಿಷತ್ ಶೈಕ್ಷಣಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ವೇದಿಕೆಯಾಗಿದ್ದು, ಜಿಲ್ಲೆಯ ವಿದ್ಯಾರ್ಥಿಗಳೊಂದಿಗೆ ಪರಿಷತ್ ಬಲಪಡಿಸಿ, ಶೋಷಿತ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸಿ, ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕಾಗಿ ಶ್ರಮಿಸಬೇಕೆಂದು ಬಸವರಾಜ ಮುಳ್ಳಾಳ ಆದೇಶಿಸಿದ್ದಾರೆ.

## ಹಳ್ಳಿಗುಡಿ ಹಾಲ್ಟ್ ರೈಲು ನಿಲ್ದಾಣ ಉದ್ಘಾಟನೆ ಸಮಾರಂಭ ಇಂದು

■ ವಿಜಯಸಾಕ್ಷಿ ಸುದ್ದಿ, ಗದಗ

ವಿಜಯಸಾಕ್ಷಿ ಸುದ್ದಿ, ಗದಗ

ಹಳ್ಳಿಗುಡಿ ಹಾಲ್ಟ್ ರೈಲು ನಿಲ್ದಾಣ ಉದ್ಘಾಟನೆ ಹಾಗೂ ರೈಲು ಸಂಖ್ಯೆ 07381/07382 ಎಸ್.ಎಸ್. ಎಸ್. ಹುಬ್ಬಳ್ಳಿ-ಕಾರಟಗಿ-ಎಸ್. ಎಸ್.ಎಸ್.ಹುಬ್ಬಳ್ಳಿ ಪ್ಯಾಸೆಂಜರ್ ರೈಲಿಗೆ ಹಳ್ಳಿಗುಡಿ ಹಾಲ್ಟ್ ರೈಲು ನಿಲ್ದಾಣದಲ್ಲಿ ನಿಲುಗಡೆಗೆ ಹಸಿರು ನಿಶಾನೆ ತೋರಿಸುವ ಕಾರ್ಯಕ್ರಮವು ಹಳ್ಳಿಗುಡಿ ಹಾಲ್ಟ್ ರೈಲು ನಿಲ್ದಾಣದಲ್ಲಿ ಶುಕ್ರವಾರ ಮಧ್ಯಾಹ್ನ 3.45 ಗಂಟೆಗೆ ಜರುಗಲಿದೆ. ಸಂಸದರಾದ ಶಿವಕುಮಾರ ಉದಾಸಿ ನಿಲುಗಡೆಗೆ ಹಸಿರು ನಿಶಾನೆ ತೋರಿಸಲಿದ್ದಾರೆ. ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ, ರಾಜ್ಯದ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ಪ್ರವಾಸೋದ್ಯಮ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಕೆ ಪಾಟೀಲ ಅವರು ಕಾರ್ಯಕ್ರಮದ ಘನ ಉಪಸ್ಥಿತಿ ವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ವಿಪತ್ತು ನಿರ್ವಹಣೆ ಸಮಿತಿ ಉದ್ಘಾಟನೆ

# ವಿಪತ್ತು ನಿರ್ವಹಣಾ ಕಾರ್ಯಕ್ಕೆ ಸ್ವಯಂಸೇವಕರು ಸಿದ್ಧರಾಗಿ



> ಕಲ್ಯಾಣ ಕರ್ನಾಟಕ ಪ್ರಾದೇಶಿಕ ನಿರ್ದೇಶಕ ಗಣೇಶ್ ಬಿ ಮಾತನಾಡಿ, ಪೂಜ್ಯ ಡಾ. ಡಿ.ವೀರೇಂದ್ರ ಹೆಗ್ಗಡೆಯವರ ಆಶಯದಂತೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಆಶ್ರಯದಲ್ಲಿ ವಿಪತ್ತು ನಿರ್ವಹಣಾ ಕಾರ್ಯಕ್ರಮ ಅನುಷ್ಠಾನಿಸಿದೆ. ವಿಪತ್ತು ಸೇವಾ ತಂಡ ರಚಿಸಿ ಅವರಿಗೆ ಸೂಕ್ತ ತರಬೇತಿ ನೀಡಿ ಹಲವಾರು ಸೇವಾ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವಂತೆ ಪ್ರೇರೇಪಿಸಲಾಗುತ್ತದೆ ಎಂದು ಹೇಳಿದರು.

■ ವಿಜಯಸಾಕ್ಷಿ ಸುದ್ದಿ, ನರಗುಂದ

ಮಲಪ್ರಭಾ ನದಿ ತೀರದ ಗ್ರಾಮಗಳ ಜನತೆ ಮೇಲಿಂದ ಮೇಲೆ ಪ್ರವಾಹಕ್ಕೆ ಸಿಲುಕುತ್ತಿದ್ದಾರೆ. ಅವರೆಲ್ಲರ ರಕ್ಷಣೆಗೆ ವಿಪತ್ತು ನಿರ್ವಹಣಾ ತಂಡದ ಅವಶ್ಯಕತೆ ಇದೆ. ಈ ತಂಡವು ಆಪತ್ಕಾಲದ ಆಪ್ತ ರಕ್ಷಕರ ತಂಡವಾಗಿದೆ ಎಂದು ಉಪ ತಹಸೀಲ್ದಾರ ಐ.ಟಿ ಜಂತ್ಲಿ ಹೇಳಿದರು.

ತಾಲೂಕಿನ ಕೊಣ್ಣೂರ ಗ್ರಾಮದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಡಿ ಶ್ರೀ ರಾಮಲಿಂಗೇಶ್ವರ ಸಮುದಾಯ ಭವನದಲ್ಲಿ ನರಗುಂದ ಮತ್ತು ರೋಣ ತಾಲೂಕಿನ 81 ಮತ್ತು 82ನೇ ವಿಪತ್ತು ನಿರ್ವಹಣಾ ಸಮಿತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಆಪತ್ಕಾಲದ ಆಪ್ತ ರಕ್ಷಕರ ಶೌರ್ಯ ವಿಪತ್ತು ನಿರ್ವಹಣಾ ಸಮಿತಿಯ ಸ್ವಯಂಸೇವಾ ತಂಡವು ತಾಲೂಕಿನಲ್ಲಿ ಸೇವೆ ಸಲ್ಲಿಸಲಿದೆ. ಪ್ರವಾಹದಂತಹ ಸಮಸ್ಯೆಗಳ ಸಂದರ್ಭದಲ್ಲಿ ಈ ಸ್ವಯಂಸೇವಕರು ಜನರ ಜೀವ ಉಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ. ಪ್ರಕೃತಿ ವಿಕೋಪದಿಂದ ಸಂಭವಿಸುವ ಅವಘಡಗಳಲ್ಲಿ ಸಿಲುಕಿದ ಜನರ ಮತ್ತು ಪ್ರಾಣಿಗಳನ್ನು ರಕ್ಷಿಸಬಹುದು. ವಾಹನ ಅಪಘಾತವಾದಾಗ ಪ್ರಯಾಣಿಕರ ಜೀವ ಉಳಿಸಬಹುದು. ಎರಡು ತಾಲೂಕಿನಲ್ಲಿ ಸಿದ್ಧವಾಗುತ್ತಿರುವ ವಿಪತ್ತು ನಿರ್ವಹಣಾ ತಂಡದ ಜೊತೆ ನಾವಿರುತ್ತೇವೆ ಎಂದು ತಿಳಿಸಿದರು. ಬೆಳ್ತಂಗಡಿ ಪ್ರಾದೇಶಿಕ ನಿರ್ದೇಶಕ ವಿವೇಕ ಪಾಯಸ್ ಮಾತನಾಡಿ, ದೇಶದಲ್ಲಿ ಭೂಕುಸಿತ, ಅಗ್ನಿ ಅವಘಡ ತಡೆಯಲು ಕೇವಲ ಇಲಾಖೆಯವರು ಬಂದು ಕಾರ್ಯ ನಿರ್ವಹಿಸುತ್ತಾರೆ. ನಮ್ಮ ಅಕ್ಕ-ಪಕ್ಕದ ಸಮಸ್ಯೆಗಳನ್ನು ದೂರದ ಊರಿನಿಂದ ಬಂದು ಬಗೆಹರಿಸುವುದು ಕಷ್ಟ. ಅದಕ್ಕಾಗಿ ವಿಪತ್ತು ನಿರ್ವಹಣಾ ಕಾರ್ಯಕ್ಕೆ ಮನೆ ಮನೆಯಿಂದ ಸ್ವಯಂಸೇವಕರು ಸಿದ್ಧರಾಗಬೇಕೆಂದು ಹೇಳಿದರು.

ಜನಜಾಗೃತಿ ಜಿಲ್ಲಾಧ್ಯಕ್ಷ ಹೆಚ್.ಬಿ ಅಸೂಟಿ, ಜಿ.ಪಂ ಮಾಜಿ ಅಧ್ಯಕ್ಷ ರಾಜುಗೌಡ ಕೆಂಚನಗೌಡ, ಪರಶುರಾಮ ಲಮಾಣಿ, ಬಾಗಲಕೋಟಿ ಅಗ್ನಿ ಶಾಮಕ ದಳದ ಠಾಣಾಧಿಕಾರಿ ಯೋಗೇಶ ಎ, ಜಗದೀಶ್ ಬಿ, ಪಾಂಡುರಂಗ ಪತ್ತಾರ, ಜಯವಂತ ಪಟಗಾರ್, ನಾಗೇಶ್ ಕೊಪ್ಪಳ, ಮಹಾಬಲೇಶ್ ಪಟಗಾರ್, ಜನ ಜಾಗೃತಿ ಮೇಲ್ವಿಚಾರಕ ಅವಿನಾಶ, ಅಗ್ನಿ ಶಾಮಕ ದಳದ ಸಿಬ್ಬಂದಿಗಳು, ವಲಯದ ಮೇಲ್ವಿಚಾರಕರು, ಕೃಷಿ ಮೇಲ್ವಿಚಾರಕ, ಆಂತರಿಕ ಲೆಕ್ಕ ಪರಿಶೋಧಕರು, ಸೇವಾ ಪ್ರತಿನಿಧಿಗಳು, ಸ್ವಯಂ ಸೇವಕರು ಉಪಸ್ಥಿತರದ್ದರು.

## ಪ್ರವಚನ ಶ್ರವಣದಿಂದ ಜ್ಞಾನ ಹೆಚ್ಚುತ್ತದೆ



■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ನಮ್ಮ ದೇಹದಲ್ಲಿನ ಇಂದ್ರಿಯಗಳು ಮಂದವಾಗುವ ಮುಂಚೆಯೆ ನಾವು ಭಗವಂತನನ್ನು ನೆನೆಯಬೇಕು. ಈ ಮಾತನ್ನು ಬಸವಣ್ಣನವರು ಈ ಮುಂಚೆಯೇ ಹೇಳಿದ್ದಾರೆ. 'ಶರೀರಗೂಡುವೋಗದ ಮುನ್ನ ನೆನೆ ಕೂಡಲ ಸಂಗಮನ' ಎಂದು. ಈ ಮಾತನ್ನು ನಾವೆಲ್ಲರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹಾಲಕೆರೆ ಸಂಸ್ಥಾನ ಪೀಠದ ಜ. ಮುಪ್ಪಿನ ಬಸವಲಿಂಗ ಮಹಾಸ್ವಾಮಿಗಳವರು ಹೇಳಿದರು.

ಈಚೆಗೆ ಹಾಲಕೆರೆ ಗ್ರಾಮದ ಶ್ರೀ ಅನ್ನದಾನೇಶ್ವರ ಶ್ರೀಮಠದಿದಂದ ಆಚರಿಸಲಾದ ಬೆಳ್ಳಿತೇರಿನ ಸಂಭ್ರಮದ ನಂತರ ನಡೆದ ಧರ್ಮ ಸಭೆಯಲ್ಲಿ ಅವರು ಆಶೀರ್ವಚನ ನೀಡಿದರು.

ಅರಿವಿನಂದ ಮನುಷ್ಯನ ಜ್ಞಾನದ ವಿಸ್ತಾರವು ಹೆಚ್ಚಾಗುತ್ತದೆ. ಈ ಜ್ಞಾನವನ್ನು ಪಡೆಯಲು ನೀವು ಇಂತಹ ಜಾತ್ರೆ, ಸಭೆ, ಸಮಾರಂಭಗಳಲ್ಲಿ ಪಾಲ್ಗೊಂಡು ಅಲ್ಲಿನ ಶ್ರೀಗಳು, ವಿದ್ವಜ್ಜನರು, ವಿದ್ವಾಂಸರು ನೀಡುವ ಪ್ರವಚನ, ಮಾತುಗಳನ್ನು ಆಲಿಸಬೇಕು. ಅವುಗಳನ್ನು ನಿಮ್ಮ ಮನೆಯಲ್ಲಿ ಅನುಷ್ಠಾನ ಮಾಡಲು ಮುಂದಾದರೆ ನಿಮ್ಮ ಜೀವನ ಪಾವನವಾಗುತ್ತದೆ ಎಂದು ಶ್ರೀಗಳು ಹೇಳಿದರು.

ಮಣಕವಾಡದ ಶ್ರೀಗಳವರು ಆಶೀರ್ವಚನ ನೀಡಿ, ಹಾಲಕೆರೆ ಶ್ರೀಮಠವು ಆಧ್ಯಾತ್ಮಿಕ ಸಂಪತ್ತಿನಿಂದ ಕೂಡಿದೆ. ಇಲ್ಲಿ ಭಕ್ತರು ಮತ್ತು ಮಠಾಧೀಶರು ಬಯಸುವ ಎಲ್ಲ ಆಧ್ಯಾತ್ಮಿಕ ಸಂಪತ್ತು ಸಿಗುತ್ತದೆ. ಪ.ಪೂ. ಲಿಂ. ಡಾ. ಅಭಿನವ ಅನ್ನದಾನ ಮಹಾಸ್ವಾಮಿಗಳವರು ಮತ್ತು ಹಿಂದಿನ ಎಲ್ಲ ಗುರುಪರಂಪರೆಯವರು ಈ ಮಠವನ್ನು ಭಕ್ತರ ಶ್ರದ್ಧಾ ಕೇಂದ್ರವನ್ನಾಗಿಸುವಲ್ಲಿ ಸಫಲರಾಗಿದ್ದಾರೆ. ಈಗ ನಾವು ಅದರ ಸಿಹಿ ಫಲಗಳನ್ನು ಉಣ್ಣುತ್ತಿದ್ದೇವೆ ಎಂದರು.

ವೇದಿಕೆಯ ಮೇಲೆ ನಾಡಿನ ಅನೇಕ ಹರಗುರು ಚರಮೂರ್ತಿಗಳು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಹಿರಿಯ ತಾಯಂದಿರ ಸನ್ಮಾನ ನಡೆಯಿತು.

# ಸರ್ಕಾರಿ ಶಾಲೆಗಳು ಬಡಜನರ ಜೀವನಾಡಿ



■ವಿಜಯಸಾಕ್ಷಿ ಸುದ್ದಿ, ಗಜೇಂದ್ರಗಡ

ಸರ್ಕಾರಿ ಕನ್ನಡ ಶಾಲೆಗಳೇ ಬಡವರ, ಶ್ರಮಿಕರ, ಕೂಲಿಕಾರ್ಮಿರ ಹಾಗೂ ಕನ್ನಡಪರ ಹೋರಾಟಗಾರರ ಮಕ್ಕಳ ಜೀವನಾಡಿಯಾಗಿವೆ. ಸರ್ಕಾರಿ ಶಾಲೆಗಳಲ್ಲಿ ಪಠ್ಯದ ಜೊತೆಗೆ ಜೀವನಕ್ಕೆ ಅಗತ್ಯವಿರುವ ತಿಳುವಳಿಕೆಯನ್ನು ನೀಡಲಾಗುತ್ತದೆ.

ಆದ್ದರಿಂದ ಸರ್ಕಾರಿ ಕನ್ನಡ ಶಾಲೆಗಳನ್ನು ಉಳಿಸುವ ಅಗತ್ಯವಿದೆ ಎಂದು ಕರ್ನಾಟಕ ಅಭಿವೃದ್ಧಿ ವೇದಿಕೆ ಸಂಘಟನೆಯ ರಾಜ್ಯಾಧ್ಯಕ್ಷರಾದ ವಿನಾಯಕ ಮು. ಜರತಾರಿ ಹೇಳಿದರು.

ಅವರು ಗಜೇಂದ್ರಗಡದ 22ನೇ ವಾರ್ಡಿನ ಸರ್ಕಾರಿ ಶಾಲೆಯ ಮಕ್ಕಳಿಗೆ ಉಚಿತವಾಗಿ ನೋಟ್ ಬುಕ್, ಪೆನ್ ವಿತರಿಸಿ ಮಾತನಾಡಿದರು. ನಮಗೆ ಬದುಕಲು ಉಸಿರು-ಹಸಿರು ಕೊಟ್ಟು ನಮ್ಮ ಆರೋಗ್ಯವನ್ನು ಕಾಪಾಡುವ ಗಿಡಮರಗಳನ್ನು ಉಳಿಸಿ ಬೆಳೆಸಬೇಕು, ಪರಿಸರವನ್ನು ಸಂರಕ್ಷಣೆ ಮಾಡಬೇಕು. ರಕ್ಷಾ ಬಂಧನದ ಮಾದರಿಯಲ್ಲಿ ವೃಕ್ಷಾ ಬಂಧನ ಆಚರಣೆ ಮಾಡಬೇಕು ಎಂದರು.

ಈ ವೇಳೆ ಶಾಲೆಯ ಆವರಣದಲ್ಲಿ ಸಸಿ ನೆಡುವ ಮೂಲಕ ಜನ್ಮದಿನ ಆಚರಿಸಿದರು. ಈ ಸಂದರ್ಭದಲ್ಲಿ ಹೂವಾಜಿ ಚಂದೂಕರ, ಜೀವನಸಾಬ್ ಸರ್ಕಾವಸ್, ಪ್ರಕಾಶ ರಾಠೋಡ, ಹನಮಂತ ಗೌಡ್ರ, ಕೃಷ್ಣ ಗುಗಲೋತ್ತರ, ಮಾರುತಿ ಗೊಂಧಳೆ, ಮೈಬು ಬಳಿಗೇರ, ಬಸವರಾಜ ಅಣ್ಣಿಗೇರಿ, ಸರ್ಕಾರಿ ಶಾಲೆಯ ಎಸ್‌ಡಿಎಂಸಿ ಮುಖ್ಯಸ್ಥರು, ಮುಖ್ಯ ಶಿಕ್ಷಕರು, ಸಿಬ್ಬಂದಿಗಳು, ಅಡುಗೆಯವರು, ಅಂಗನವಾಡಿ ಸಿಬ್ಬಂದಿಗಳು, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

### ಸೇವಾ ದೀಕ್ಷೆ ಸಮಾರಂಭದಲ್ಲಿ ಕೆ.ಎಸ್ ಕಳಕಣ್ಣವರ

# ಬೀಚಿ ದಶಮಾನೋತ್ಸವ ಸಂಭ್ರಮದಿಂದ ಆಚರಿಸೋಣ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಈಗಾಗಲೇ ನಿಗದಿಯಾಗಿರುವಂತೆ ಬರುವ ಡಿಸೆಂಬರ್ 10ರಂದು ಆಯೋಜಿಸಿರುವ ಬೀಚಿ ಬಳಗದ ದಶಮಾನೋತ್ಸವವನ್ನು ಎಲ್ಲರೂ ಸೇರಿ ಸಡಗರ, ಸಂಭ್ರಮಗಳಿಂದ ಆಚರಿಸೋಣ ಎಂದು ಬಳಗದ ನೂತನ ಅಧ್ಯಕ್ಷ, ನಿವೃತ್ತ ಮುಖ್ಯ ಶಿಕ್ಷಕ ಕೆ.ಎಸ್ ಕಳಕಣ್ಣವರ ಹೇಳಿದರು.

ಇಲ್ಲಿನ ಹಿರೇಮಠದ ಸಭಾಭವನದಲ್ಲಿ ಬುಧವಾರ ಸಂಜೆ 2023-24ನೇ ಸಾಲಿನ ಸೇವಾ ದೀಕ್ಷೆ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ಬಳಗದ ದಶಮಾನೋತ್ಸವವನ್ನು ಆಚರಿಸುವ ಮಹತ್ತರ ಕಾರ್ಯ ನನ್ನ ಮತ್ತು ಸೇವಾದೀಕ್ಷೆ ತೆಗೆದುಕೊಂಡಿರುವ ಎಲ್ಲ ಪದಾಧಿಕಾರಿಗಳಿಗೆ ಒದಗಿಬಂದದ್ದು ಸಂತೋಷದ ವಿಚಾರ. ಈ ಕಾರ್ಯವನ್ನು ಕಾಯಾ, ವಾಚಾ, ಮನಸಾ ನಾವೆಲ್ಲರೂ ನೆರವೇರಿಸಲು ಕಂಕಣಬದ್ಧರಾಗಿದ್ದೇವೆ. ಅದಕ್ಕೆ ನಿಮ್ಮೆಲ್ಲರ, ಸಾಹಿತ್ಯಾಭಿಮಾನಿಗಳ ಸಹಕಾರ ಬೇಕೆಂದು ಹೇಳಿದರು.

ನಿವೃತ್ತ ಶಿಕ್ಷಕ ಎಂ.ಎಸ್ ದಢೇಸೂರಮಠ ಮಾತನಾಡಿ, ಈ ದಶಮಾನೋತ್ಸವದ ಸಂದರ್ಭದಲ್ಲಿ ಬೀಚಿ ಬಳಗದ ಸದಸ್ಯತ್ವವನ್ನು ಹೆಚ್ಚಿಸಲು ಎಲ್ಲರೂ ಮನಸ್ಸು ಮಾಡೋಣ. ಯಾರೇ ಸಾಹಿತ್ಯಾಭಿಮಾನಿಗಳಿದ್ದರೂ ಅವರು ಬೀಚಿ ಬಳಗದ ಸದಸ್ಯರಾಗಬಹುದು. ಇದು ಎಲ್ಲರಿಗೂ ಮುಕ್ತವಾದ ವೇದಿಕೆಯಿದ್ದು, ಇದರಲ್ಲಿ ಸದಸ್ಯರಾಗುವ ಮೂಲಕ ಸಾಹಿತ್ತಿಕ ಕಾರ್ಯಗಳಿಗೆ ಪ್ರೇರಣೆ ನೀಡಬೇಕೆಂದು ಹೇಳಿದರು.

ನಿಕಟಪೂರ್ವ ಅಧ್ಯಕ್ಷ ಸುರೇಶ ಹಳ್ಳಿಕೇರಿ ಮಾತನಾಡಿ, ತಮ್ಮ ಅವಧಿಯಲ್ಲಿ ಮಾಡಿದ ಕಾರ್ಯಗಳ ವಿವರಣೆ ನೀಡಿದರು. ಸಹಕಾರ ನೀಡಿದ ಸರ್ವರನ್ನೂ ವಂದಿಸಿದ ಅವರು, ನಮ್ಮಿಂದ ಸಾಧ್ಯವಾಗದ ಕಾರ್ಯಗಳನ್ನು ನೂತನ ಅಧ್ಯಕ್ಷರು ಮತ್ತು ಅವರ ತಂಡ ಮುನ್ನಡೆಸಿಕೊಂಡು ಹೋಗಲಿ ಎಂದು ಹಾರೈಸಿದರು.

ಸಭೆಯನ್ನುದ್ದೇಶಿಸಿ ಖಜಾಂಚಿ ಶಿವಯೋಗಿ ಜಕ್ಕಲಿ, ನಿವೃತ್ತ ಪ್ರಾಚಾರ್ಯ ಡಿ.ಎ ಅರವಟಗಿಮಠ, ಡಾ. ರಾಜೇಂದ್ರ ಗಚ್ಚಿನಮಠ, ಉಪನ್ಯಾಸಕ ಎಸ್.ಸಿ ಗುಳಗಣ್ಣವರ, ನ್ಯಾಯವಾದಿ ರಾಜಶೇಖರಗೌಡ ಪಾಟೀಲ, ಮುಖ್ಯ ಶಿಕ್ಷಕಿ ಭಾರತಿ ಶಿರ್ಸಿ, ಶಿಕ್ಷಕ ಎಂ.ಕೆ ಬೇವಿನಕಟ್ಟಿ, ಶಿಕ್ಷಕ ಬಿ.ಟಿ ತಾಳಿ, ನಿವೃತ್ತ ಮುಖ್ಯ ಶಿಕ್ಷಕ ಅರುಣ ಬಿ.ಕುಲಕರ್ಣಿ ಮಾತನಾಡಿದರು. ಕಾರ್ಯದರ್ಶಿ ಎಚ್.ವೈ ಈಟಿ ನಿರೂಪಿಸಿದರು. ಸಂಚಾಲಕ ಈಶ್ವರ ಬೆಟಗೇರಿ ವಂದಿಸಿದರು.

# ಪ್ರತಿಯೊಬ್ಬರಿಗೂ ಕಂಪ್ಯೂಟರ್ ಜ್ಞಾನ ಅಗತ್ಯ




■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಇಂದಿನ ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಪ್ರತಿಯೊಬ್ಬರಿಗೂ ಕಂಪ್ಯೂಟರ್ ಜ್ಞಾನದ ಅವಶ್ಯಕತೆ ಇದೆ ಎಂದು ಗದಗ-ಬೆಟಗೇರಿ ರೋಟರಿ ಕ್ಲಬ್ ಅಧ್ಯಕ್ಷ ಸಿ.ಕೆ ಜಾಲಿ ಹೇಳಿದರು.

ಅವರು ಸಮೀಪದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಂಸ್ಥೆಯ ವತಿಯಿಂದ ಕಂಪ್ಯೂಟರ್ ದೇಣಿಗೆ ನೀಡಿ ಮಾತನಾಡಿ, ಇಂದಿನ ಆಧುನಿಕ ಕಾಲದಲ್ಲಿ ಪ್ರತಿಯೊಂದು ಮಗುವಿಗೂ ಕಂಪ್ಯೂಟ್ ಜ್ಞಾನದ ಅವಶ್ಯಕತೆಯಿದೆ. ಮಕ್ಕಳು ಪ್ರತಿ ದಿನ ಒಂದು ಗಂಟೆಯಾದರೂ ಶಾಲೆಯಲ್ಲಿ ಕಂಪ್ಯೂಟರ್ ಬಳಕೆಯ ಮಾಹಿತಿ ಪಡೆದುಕೊಂಡರೆ ಮುಂದಿನ ಹಂತದಲ್ಲಿ ಕಲಿಕೆ ಸರಳವಾಗುತ್ತದೆ. ಇದರಿಂದ ಉನ್ನತ ವ್ಯಾಸಂಗಕ್ಕೆ ಸಹಾಯವಾಗುತ್ತದೆ ಎಂದರು.

ಮುಳಗುಂದ ಕ್ಲಸ್ಟರ್ ಸಿಆರ್‌ಪಿ ಮಾತನಾಡಿ, ಗ್ರಾಮೀಣ ಮಟ್ಟದಲ್ಲಿನ ಸರಕಾರಿ ಶಾಲೆಯಲ್ಲಿ ಕಲಿಯುವ ಮಕ್ಕಳ ಕಲಿಕೆಗೆ ನೀಡಿದ ಕಂಪ್ಯೂಟರ್ ನೀಡಿದ ಗದಗ-ಬೆಟಗೇರಿ ರೋಟರಿ ಕ್ಲಬ್ ಸೇವೆ ಶ್ಲಾಘನಿಯ. ಈ ಕ್ಲಬ್ ಯಾವಾಗಲೂ ಸಮಾಜ ಸೇವೆಯಲ್ಲಿ ಮುಂಚೂಣಿಯಲ್ಲಿದ್ದು ಸೇವೆ ಸಲ್ಲಿಸುತ್ತದೆ. ಮಕ್ಕಳ ಕಲಿಕೆಗಾಗಿ ನೀಡಿದ ದಾನ ಎಂದಿಗೂ ವ್ಯರ್ಥವಾಗದು ಎಂದರು.

ಅಕ್ಷಯ ಶೆಟ್ಟಿ, ಸಂತೋಷ ಅಕ್ಕಿ, ಶ್ರೀಧರ ಸುಲ್ತಾನಪೂರ, ಶಿವಾಚಾರ್ಯ ಹೊಸಳ್ಳಿಮಠ, ಮೈಲಾರಪ್ಪ ಬಂಗಿ, ಶಾಲಾ ಪ್ರಾಧಾನ ಗುರು ಬಿ.ವಿ ಹುಡೇದ, ಪ.ಪಂ ಸದಸ್ಯ ಕೆ.ಎಲ್ ಕರಿಗೌಡರ, ಶಿಕ್ಷಕಿ ಆರ್.ಜಿ ಬದಿ, ಎಸ್.ಎಸ್ ಹುಲ್ಲಲ್ಲಿ, ಸಿಆರ್‌ಪಿ ಎಂ.ಎಂ ನಿಂಬನಾಯ್ಕರ್ ಇದ್ದರು.

# ಎಲ್ಲರೂ ಭಾತೃತ್ವ ಭಾವನೆಯಿಂದ ಬಾಳಿ



■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಸದ್ಗುಣ ಹಾಗೂ ಒಗ್ಗಟಿನ ಸಂಕೇತವೇ ರಕ್ಷಾ ಬಂಧನವಾಗಿದೆ. ರಕ್ಷಾ ಬಂಧನವು ಸಹೋದರ-ಸಹೋದರಿಯರ ನಿರಂತರ ಪ್ರಿತಿ ಮತ್ತು ಪವಿತ್ರ ಸಂಬಂಧವನ್ನು ಪ್ರತಿಬಿಂಬಿಸುವ ಹಬ್ಬವಾಗಿದ್ದು, ಒಡಹುಟ್ಟಿದವರಷ್ಟೇ ಸಹೋದರ-ಸಹೋದರಿಯರಲ್ಲದೆ, ಎಲ್ಲರೂ ಇದೇ ಭಾವನೆಯನ್ನು ಮೂಡಿಸಿಕೊಂಡು ಬಾಳಬೇಕು ಎಂದು ಈಶ್ವರೀಯ ವಿಶ್ವವಿದ್ಯಾಲಯ ಶಿವಾನಿ ಅಕ್ಕನವರು ಹೇಳಿದರು.

ಅವರು ಪಟ್ಟಣದ ಸರಕಾರಿ ಮಾದರಿ ಕನ್ನಡ ಗಂಡು ಮಕ್ಕಳ ಶಾಲೆ ನಂ.1ರಲ್ಲಿ ರಕ್ಷಾ ಬಂಧನ ಹಬ್ಬದ ನಿಮಿತ್ತ ಶಾಲಾ ಶಿಕ್ಷಕ ವೃಂದಕ್ಕೆ ರಾಖಿ ಕಟ್ಟಿ ಮಾತನಾಡಿದರು.

ಶಾಲಾ ಪ್ರಧಾನ ಗುರು ಪಿ.ಬಿ ಕೆಂಚನಗೌಡರ, ಮಾಹಾಂತೇಶ ಕೆಂಚನಾಯ್ಕರ, ಮಾಹಾಂತೇಶ ಕಣವಿ, ಮಾಹಾದೇವಪ್ಪಾ ಮಾನೇಗಾರ, ರವಿ ಡಂಬಳ, ಬಿ.ವಿ ಚಕ್ರಸಾಲಿ, ಎ.ಸಿ ಶ್ಯಾಗೋಟಿ, ಬಿ.ವಿ ಹುಡೇದ, ಸಿಆರ್‌ಪಿ ಎಂ.ಎಂ ಮೇಗಲಮನಿ ಸೇರಿದಂತೆ ಶಾಲಾ ಶಿಕ್ಷಕ ವೃಂದದವರು ಇದ್ದರು.

### ಅನಿಯಮಿತ ಲೋಡ್ ಶೆಡ್ಡಿಂಗ್ ವಿರೋಧಿಸಿ ರೈತರ ಪ್ರತಿಭಟನೆ: ಗ್ರಿಡ್‌ಗೆ ಬೆಂಕಿ ಹಚ್ಚುವುದಾಗಿ ಆಕ್ರೋಶ

# ರೈತರ ಕೆಂಗಣ್ಣಿಗೆ ಕಂಗಾಲಾದ ಹೆಸ್ಕಾಂ ಅಧಿಕಾರಿಗಳು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ರೈತರ ಐಪಿ ಪಂಪ್‌ಸೆಟ್‌ಗಳಿಗೆ 7 ಗಂಟೆಗಳ ಕಾಲ ನೀಡುತ್ತಿದ್ದ 3 ಫೇಸ್ ವಿದ್ಯುತ್ ಸಂಪರ್ಕವನ್ನು ತೆಗೆದು ಹಾಕಿ, ಕಳೆದೆರಡು ದಿನಗಳಿಂದ ವಿದ್ಯುತ್ ಲೋಡ್‌ಶೆಡ್ಡಿಂಗ್ ಪ್ರಾರಂಭಿಸಿದ್ದಲ್ಲದೆ ದಿನಕ್ಕೆ ಕೇವಲ 3 ಗಂಟೆಗಳ ಕಾಲ ಮಾತ್ರ ವಿದ್ಯುತ್ ಪೂರೈಕೆ ಮಾಡುತ್ತಿರುವುದನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸಿದ್ದರಿಂದ, ಹೆಸ್ಕಾಂ ಅಧಿಕಾರಿಗಳು ಕಂಗಾಲಾದ ಪ್ರಸಂಗ ಗುರುವಾರ ನರೇಗಲ್ಲ ಹೆಸ್ಕಾಂ ಕಚೇರಿ ಮತ್ತು ವಿದ್ಯುತ್ ಗ್ರಿಡ್‌ನಲ್ಲಿ ನಡೆಯಿತು.



ಜಮೀನಿನಲ್ಲಿ ಬೆಳೆದ ಬೆಳೆಗಳಿಗೆ ನೀರು ಹಾಯಿಸಲು ಸಾಧ್ಯವಾಗದೆ ಬೆಳೆಗಳು ಒಣಗುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿ, ಪಟ್ಟಣ ಸೇರಿದಂತೆ ಸುತ್ತಲಿನ ಗ್ರಾಮಗಳ ರೈತರು ಗುರುವಾರ ಮೊದಲು ಜಕ್ಕಲಿ ರಸ್ತೆಯ ಕೆಇಬಿ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು. ನಂತರ ತಮ್ಮ ಪ್ರತಿಭಟನೆಯನ್ನು ಗ್ರಿಡ್‌ಗೆ ಸ್ಥಳಾಂತರಿಸಿದರು.

ರೈತರಾದ ವಿರುಪಾಕ್ಷಪ್ಪ ರಡ್ಡೇರ, ಎಂ.ಎಸ್ ಧಡೇಸೂರಮಠ ಮಾತನಾಡಿ, ಪ್ರಸಕ್ತ ಸಾಲಿನ ಮುಂಗಾರು ಸಂಪೂರ್ಣ ಕೈಕೊಟ್ಟಿದೆ. ಮಳೆ ಇಲ್ಲದ ಕಾರಣ ಬಿತ್ತನೆ ಮಾಡಿದ್ದ ಹೆಸರು ಬೆಳೆ ಹೆಸರಿಲ್ಲದಂತಾಗಿದೆ. ನೀರಾವರಿ ಜಮೀನಿನಲ್ಲಾದರೂ ಬೆಳೆ ಬೆಳೆಯೋಣ ಎಂದು ಸಾಲ-ಸೋಲ ಮಾಡಿ ಬಿತ್ತನೆ ಮಾಡಲಾಗಿದೆ. ಆದರೆ, ಈಗ ಅನಿಯಮಿತ ಲೋಡ್ ಶೆಡ್ಡಿಂಗ್ ಪ್ರಾರಂಭಿಸಿದ್ದು, ಕೇವಲ 3 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ನೀಡಲಾಗುತ್ತಿದೆ. ಇದರಿಂದ ಬಿತ್ತಿದ ಬೆಳೆಗಳಿಗೆ ನೀರು ಹಾಯಿಸಲು ಸಾಧ್ಯವಾಗುತ್ತಿಲ್ಲ. ದೇಶಕ್ಕೆ ಅನ್ನ ನೀಡುವ ರೈತನ ಜಮೀನಿಗೆ ನೀರು ಹರಿಸಲು ವಿದ್ಯುತ್ ಇಲ್ಲ ಎಂದರೆ ಹೇಗೆ? ಇದು ನ್ಯಾಯ ಸಮ್ಮತವೇ? ಎಂದರು.

ಎಸ್.ಬಿ ಜುಟ್ಲದ, ಸೋಮಶೇಖರಯ್ಯ ಓದಿಸೂಮಠ ಮಾತನಾಡಿ, ಮಳೆ ಇಲ್ಲದೆ ಸಾಕಷ್ಟು ನಷ್ಟ ಅನುಭವಿಸಿದ್ದೇವೆ. ಈಗ ವಿದ್ಯುತ್ ಕಣ್ಣಾಮುಚ್ಚಾಲೆಯಾಡುತ್ತಿದೆ. ಈ ಹಿಂದೆ ಬೆಳಿಗ್ಗೆ ರಿಂದ ಸಂಜೆ 4 ಗಂಟೆಯವರೆಗೆ 3ಫೇಸ್ ವಿದ್ಯುತ್ ನೀಡಲಾಗುತ್ತಿತ್ತು. ಅದನ್ನು ನೆಚ್ಚಿಕೊಂಡು ರೈತರು ಮೆಣಸಿನಕಾಯಿ, ಗೋವಿನಜೋಳ, ಸೇರಿದಂತೆ ವಿವಿಧ ಬೆಳೆಯನ್ನು ಬೆಳೆದಿದ್ದಾರೆ. ಈಗ ಏಕಾಏಕಿ ಲೋಡ್‌ಶೆಡ್ಡಿಂಗ್ ಎಂದರೆ ರೈತರ ಗತಿ ಏನು? ಈ ಹಿಂದಿನಂತೆ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಪೂರೈಕೆ ಮಾಡಬೇಕು. ಅಲ್ಲಿಯವರೆಗೂ ಪ್ರತಿಭಟನೆಯಿಂದ ಹಿಂದೆ ಸರಿಯುವುದಿಲ್ಲ ಎಂದು ಪಟ್ಟು ಹಿಡಿದರು.

ಇಇ ರವಿಕಿರಣ, ಎಇಇ ಚೇತನ ಹಾದಿಮನಿ ಸ್ಥಳಕ್ಕಾಗಮಿಸಿ ರೈತರನ್ನು ಉದ್ದೇಶಿಸಿ ಮಾತನಾಡಿ, ಮೇಲಾಧಿಕಾರಿಗಳಿಂದ ಬಂದಿರುವ ಆದೇಶದ ಹಿನ್ನೆಲೆಯಲ್ಲಿ ಲೋಡ್ ಶೆಡ್ಡಿಂಗ್ ಮಾಡಲಾಗುತ್ತಿದೆ. ರೈತರು ಇಲಾಖೆಯೊಂದಿಗೆ ಸಹಕರಿಸಬೇಕು ಎಂದರು. ಇದಕ್ಕೆ ಬಗ್ಗದ ರೈತರು, ನಮಗೆ ವಿದ್ಯುತ್ ಪೂರೈಕೆಯಾಗುವವರೆಗೂ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪ್ರತಿಭಟನೆ ಮುಂದುವರೆಸಿದರು.

ಎಸ್.ಎ ಗಡ್ಡಿ, ಎಚ್.ಎಸ್ ದೇಸಾಯಿಗೌಡ್ರ, ಎಸ್.ಕೆ ಸಂಕನೂರ, ಎಸ್.ಬಿ ಹಿರೇಹಾಳ, ಸುರೇಶ ಜಕ್ಕಲಿ, ವೀರಪ್ಪ ಕುಷ್ಟಗಿ, ಎ.ಕೆ ಸಂಕನಗೌಡ್ರ, ಹನಮಪ್ಪ ಹಾಲವರ, ಎಂ.ವಿ ತೇಜಪ್ಪನವರ, ಪ್ರದೀಪ ಹುಯಿಲಗೋಳಮಠ, ಕಳಕಪ್ಪ ಜೋಗಿ, ಎಸ್.ಕೆ ಮಾವಿನಕಾಯಿ, ಹುಸೇನಸಾಬ ದರ್ಗಾದ ಸೇರಿದಂತೆ ಸುತ್ತಲಿನ ಗ್ರಾಮಗಳ ರೈತರು ಪಾಲೊಂಡಿದ್ದರು.

> ರಾಜ್ಯದಲ್ಲಿ ಸೌರ/ಪವನ/ಜಲ ವಿದ್ಯುತ್ ಉತ್ಪಾದನೆ ಕುಂಠಿತಗೊಂಡಿರುವುದರಿಂದ ಹಾಗೂ ಮುಂಗಾರು ಮಳೆ ಕೊರತೆಯಾಗಿರುವುದರಿಂದ ವಿದ್ಯುತ್ ಬೇಡಿಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ತಾತ್ಕಾಲಿಕವಾಗಿ ಬೇಡಿಕೆ ಮತ್ತು ಪೂರೈಕೆಯಲ್ಲಿ ಕೊರತೆಯುಂಟಾಗಿದ್ದು, ಅನಿಯಮಿತ ವಿದ್ಯುತ್ ಕಡಿತ ಅನಿವಾರ್ಯವಾಗಿದೆ. ರೈತರು ಹಾಗೂ ಸಾರ್ವಜನಿಕರು ಸಹಕರಿಸಬೇಕು.
>
> **– ರವಿಕಿರಣ, ಇಇ ಹೆಸ್ಕಾಂ.**

ಸಂಜೆ 4 ಗಂಟೆಗೆ ಕೆಇಬಿಯಿಂದ ವೀರಪ್ಪಜ್ಜನ ರಸ್ತೆಯ ಕೆಇಬಿ ಗ್ರಿಡ್‌ಗೆ ಪ್ರತಿಭಟನೆಯನ್ನು ಸ್ಥಳಾಂತರಿಸಲಾಯಿತು. ಗ್ರಿಡ್‌ಗೆ ಮುತ್ತಿಗೆ ಹಾಕಿದ ರೈತರು ವಿದ್ಯುತ್ ಪೂರೈಕೆ ಮಾಡದಿದ್ದರೆ ಗ್ರಿಡ್‌ಗೆ ಬೆಂಕಿ ಹಚ್ಚುವುದಾಗಿ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ದಿಕ್ಕು ತೆ-ೋಚದಂತಾದ ಹೆಸ್ಕಾಂ ಸಿಬ್ಬಂದಿ ವಿದ್ಯುತ್ ಪೂರೈಕೆಯನ್ನು ಪ್ರಾರಂಭಿಸಿದರು. ಯಾವುದೇ ಕಾರಣಕ್ಕೂ 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಬಾರದು. ನಾವು ಇಲ್ಲಿಂದ ಹೋದ ನಂತರ ಮತ್ತೆ ವಿದ್ಯುತ್ ಕಡಿತಗೊಳಿಸಿದಲ್ಲಿ ಉಗ್ರವಾದ ಹೋರಾಟ ಮಾಡಲಾಗುತ್ತದೆ ಎಂದು ಎಚ್ಚರಿಸಿ ಪ್ರತಿಭಟನೆ ಕೈಬಿಟ್ಟರು.

# 'ಬಯಸದೇ ಬಂದ ರಾಜಯೋಗ' ಕಿರು ಚಿತ್ರದ ಹಾಡಿನ ಧ್ವನಿಮುದ್ರಣ



■ವಿಜಯಸಾಕ್ಷಿ ಸುದ್ದಿ, ಗದಗ

ಅಭಿ ಕ್ರಿಯೇಷನ್ಸ್ ಗದಗ ಅವರ ಡಾ. ಕಲ್ಮೇಶ್ ಹಾವೇರಿಪೇಟ್ ಇವರ ಶುಭ ಹಾರೈಕೆಗಳೊಂದಿಗೆ, ಮಹಾಮಹಿಮ ಲಡ್ಡುಮುತ್ಯಾ ಚಲನಚಿತ್ರ ಖ್ಯಾತಿಯ ನಿರ್ದೇಶಕ ಅರವಿಂದ್ ಮುಳಗುಂದ ನಿರ್ದೇಶನದ 'ಬಯಸದೇ ಬಂದ ರಾಜಯೋಗ' ಕಿರು ಚಿತ್ರಕ್ಕಾಗಿ ಗೀತೆಯ ಧ್ವನಿ ಮುದ್ರಣವು ಮಲ್ಲಿಕಾರ್ಜುನ ಸಂಶಿ ಸಂಗೀತ ನಿರ್ದೇಶನದಲ್ಲಿ, ಮಲ್ಲಿಕಾರ್ಜುನ ಮತ್ತು ವನಿತಾ ಪರಮೇಶ್ವರ್ ಇವರ ಧ್ವನಿಯಲ್ಲಿ ಎಸ್.ಎನ್ ಜಾಲ್ಸ್ ಕ್ರಿಯೇಟಿವ್ ಸ್ಟುಡಿಯೋದಲ್ಲಿ ನಡೆಯಿತು.

ಸೆಪ್ಟೆಂಬರ್ ಮೊದಲ ವಾರದಲ್ಲಿ ದಯಾನಂದ ಜಿ ಅವರ ಛಾಯಾಗ್ರಹಣದಲ್ಲಿ ಧಾರವಾಡ, ದಾಂಡೇಲಿ, ಕಲಘಟಗಿ, ಗೋವಾ ಸುತ್ತಮುತ್ತ ಒಂದು ವಾರಗಳ ಕಾಲ ಚಿತ್ರೀಕರಣ ನಡೆಯಲಿದೆ. ಸಮಾಜಕ್ಕೆ ಒಳ್ಳೆಯ ಸಂದೇಶ ಈ ಕಿರುಚಿತ್ರದಲ್ಲಿದೆ. ನಾಯಕ ನಟರಾಗಿ ಬೆಂಗಳೂರಿನಲ್ಲಿ ವೈದ್ಯ ವೃತ್ತಿ ಮಾಡುತ್ತಿರುವ, ಚಲನಚಿತ್ರ ತರಬೇತಿ ಪಡೆದಿರುವ ಡಾ.ಕಿರಣಚಂದ್ರ, ನಾಯಕಿಯರಾಗಿ ಶೋಭಾರಾಣಿ, ಸಿಂಧು, ಅಪೂರ್ವ ಭರಣಿ, ಪೂರ್ಣಿಮಾ, ಅಮೃತಾ, ಸಿದ್ದುಕೃಷ್ಣ, ಎ.ಚಂದ್ರಶೇಖರ, ಕಿಶನ್ ರಾವ್ ಕುಲಕರ್ಣಿ (ಆನೆಹೊಸೂರ), ಎನ್.ಎಸ್ ಪಾಟೀಲ್(ಹೂಲಿ), ರಾಜೇಶ್ವರಿ, ಕೀರ್ತಿ ಅರವಿಂದ್, ಲಕ್ಷ್ಮೀ ಎಸ್.ಬಿ, ಶಂಭು ಪಾಟೀಲ್, ಗಣೇಶ್ ಜಾಧವ್, ರಾಮು ಮೊದಲಾದವರು ಅಭಿನಯಿಸಲಿದ್ದಾರೆ.

ಕಥೆ, ಸಂಭಾಷಣೆ ಮಧು ಜೋಶಿ, ಸಾಹಿತ್ಯ ಪ್ರಮೋದ್ ಜೋಶಿ, ಪ್ರಸಾದನ ದೇವೇಂದ್ರ ಕಮ್ಮಾರ, ಸಾಹಸ-ಸ್ಟೈಲ್ ಚಂದ್ರು, ಸಂಗೀತ ಮಲ್ಲು ಸಂಶಿ, ಹಿನ್ನಲೆ ಗಾಯನ ವನಿತಾ ಪರಮೇಶ್ವರ, ಸಂಕಲನ ಸಿದ್ದಾರ್ಥ ಜಾಲಿಹಾಳ, ಪತ್ರಿಕಾ ಸಂಪರ್ಕ ಡಾ.ವೀರೇಶ ಹಂಡಿಗಿ, ಪ್ರಚಾರಕಲೆ ಅವಿನಾಶ್ ಗಂಜಿಹಾಳ, ಸಹಕಾರ ಮಹಾಂತೇಶ ಹಳ್ಳೂರ, ಸಹ ನಿರ್ದೇಶನ ಡಾ.ಪ್ರಭು ಗಂಜಿಹಾಳ, ನಿರ್ವಹಣೆ ರಘು ತುಮಕೂರು, ಆನಂದ್ ಜೋಶಿ, ಚಿತ್ರಕಥೆ-ನಿರ್ದೇಶನ ಅರವಿಂದ್ ಮುಳಗುಂದ ಅವರದಿದೆ.

ಸಂಗೀತಾ ಚಂದ್ರಶೇಖರ್, ವಿದ್ಯಾ ಗಂಜಿಹಾಳ, ರೇಖಾ ಸಿದ್ದುಕೃಷ್ಣ ಕಿರುಚಿತ್ರದ ನಿರ್ಮಾಪಕರಾಗಿದ್ದು, ಗಣೇಶ ಚತುರ್ಥಿಗೆ ಬಿಡುಗಡೆ ಮಾಡುವದಾಗಿ ನಿರ್ದೇಶಕ ಅರವಿಂದ ತಿಳಿಸಿದ್ದಾರೆ.

# ಅಪರಿಚಿತ ಶವ ಪತ್ತೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಕಣಗಿನಹಾಳ ರೈಲ್ವೆ ನಿಲ್ದಾಣಗಳ ಮಧ್ಯ ಯಾವುದೋ ಚಲಿಸುವ ರೈಲಿಗೆ ಬಿದ್ದು ಒಬ್ಬ ಅಪರಿಚಿತ ಗಂಡಸು ವಯಾ ಸುಮಾರು 40-45 ವರ್ಷದವನು ಆ.31ರಂದು ಮೃತಪಟ್ಟಿದ್ದು, ಈ ಸಂಬಂಧ ಗದಗ ರೇಲ್ವೆ ಪೊಲೀಸ್ ಠಾಣೆ ಯುಡಿಆರ್ ನಂ. 48/2023, ಕಲಂ 174 ಸಿಆರ್‌ಪಿಸಿ ಪ್ರಕರಣದಲ್ಲಿ ದಾಖಲಾಗಿದೆ.

**ಮೃತನ ಚಹರೆ:** ವಯಾ ಸುಮಾರು 40-45 ವರ್ಷ, ಕಪ್ಪು ಮೈಬಣ್ಣ, ದುಂಡು ಮುಖ, ಅಗಲವಾದ ಹಣೆ, ಸದೃಢ ಮೈಕಟ್ಟು, ಉದ್ದನೆಯ ಮೂಗು, ತಲೆಯಲ್ಲಿ ಸುಮಾರು 1 ಇಂಚು ಕಪ್ಪು/ಬಿಳಿ ಕೂದಲು, 1 ಇಂಚು ಮೀಸೆ, 2 ಇಂಚು ಗಡ್ಡವನ್ನು ಬಿಟ್ಟಿರುತ್ತಾನೆ.

ಮೃತನ ಮೈಮೇಲೆ ತಿಳಿ ನೀಲಿ ಬಣ್ಣದ USPA ಅಂತಾ ಕುದರೆ ಚಿತ್ರವುಳ್ಳ ಟೀ ಶರ್ಟ್, ಬೂದಿ ಬಣ್ಣದ, ಬಿಳಿ ಗೆರೆಯುಳ್ಳ ನೈಟ್ ಪ್ಯಾಂಟ್, ಕೆಂಪು ಬಣ್ಣದ ಇಲಾಸ್ಟಿಕ್ ಕಾಚಾ, ಕಪ್ಪು ಬಣ್ಣದ ಒಂದು ಜೋಡಿ ಚಪ್ಪಲಿ, ಕೆಂಪು ಕಲರಿನ ಟವಾಲ್, ಕೆಂಪು ದಾರ ಬಿದ್ದಿರುತ್ತದೆ.

ಮೃತನು ಅಪರಿಚಿತನಿದ್ದು, ಸದರ ಮೃತನ ವಾರಸುದಾರರ ಪತ್ತೆ ಸಲುವಾಗಿ ರೇಲ್ವೆ ಪೊಲೀಸರು ಪ್ರಕಟಣೆ ನೀಡಿದ್ದು, ಒಂದು ವೇಳೆ ಸದರಿ ಮೃತನ ಕುರಿತು ವಿವರಗಳು ಪತ್ತೆಯಾದಲ್ಲಿ ಗದಗ ರೈಲ್ವೆ ಪೊಲೀಸ್ ಠಾಣೆಯ ದೂರವಾಣಿ-08372-278744, ಮೊ.ನಂ-9480802128, ಇಟಚುಟ: ರಚಿಜಚಿರಡಿಟಥಿ@ಞಿ.ರಂತ.ಎಟ ಅಥವಾ ರೈಲ್ವೆ ಪೊಲೀಸ್ ಕಂಟ್ರೋಲ್ ರೂಂ-080-22871291 ಇಲ್ಲಿಗೆ ತಿಳಿಸಲು ಪ್ರಕಟಣೆ ಕೋರಿದೆ.

## ಅರವಳಿಕೆ ತಜ್ಞನ ಮೇಲೆ ಕಾಡಾನೆ ದಾಳಿ; ಗಂಭೀರ ಗಾಯ!

■ವಿಜಯಸಾಕ್ಷಿ ಸುದ್ದಿ, ಹಾಸನ

ಹಾಸನ ಜಿಲ್ಲೆಯ ಆಲೂರು ತಾಲೂಕಿನ ಹುಲಿಯೂರು ಗ್ರಾಮದಲ್ಲಿ ಕಾಡಾನೆಯೊಂದು ವೈದ್ಯಕೀಯ ಸಿಬ್ಬಂದಿ ಮೇಲೆ ದಾಳಿ ನಡೆಸಿದ್ದು, ಅರವಳಿಕೆ ತಜ್ಞ ತೀವ್ರವಾಗಿ ಗಾಯಗೊಂಡಿದ್ದಾರೆ.

ಗಾಯಗೊಂಡಿರುವ ಅರವಳಿಕೆ ತಜ್ಞ ವೆಂಕಟೇಶ್ ಶಾರ್ಪ್ ಶೂಟರ್ ಆಗಿದ್ದು, ಚಿಕಿತ್ಸೆ ನೀಡಲೆಂದು ಹೋದಾಗ, ಆನೆಗೆ ಅರವಳಿಕೆ ನೀಡುವ ಪ್ರಕ್ರಿಯೆ ವೇಳೆ ಈ ಅವಘಡ ಸಂಭವಿಸಿದೆ.

### ಒಂದಿನಿತೂ ಮಳೆಯಿಲ್ಲದೆ ಕಾದ ಕಾವಲಿಯಂತಾದ ಕೃಷಿ ಭೂಮಿ

# ಒಣಗುತ್ತಿರುವ ಬೆಳೆ ರಕ್ಷಿಸಲು ರೈತರ ಹರಸಾಹಸ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ತಾಲೂಕಿನಲ್ಲಿ ಕಳೆದ 35 ದಿನಗಳಿಂದ ಮಳೆ ಇಲ್ಲದೇ ಬೆಳೆಗಳು ಒಣಗತೊಡಗಿವೆ. ಈ ಹಿನ್ನೆಲೆಯಲ್ಲಿ ಲಕ್ಷ್ಮೇಶ್ವರ ಸೇರಿದಂತೆ ತಾಲೂಕಿನಾದ್ಯಂತ ಹಲವು ರೈತರು ಒಣಗುತ್ತಿರುವ ಬೆಳೆಗಳನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ.





ಗುರುವಾರ ಗದಗ-ಲಕ್ಷ್ಮೇಶ್ವರ ರಸ್ತೆಯ ಹತ್ತಿರದ ಜಮೀನೊಂದರಲ್ಲಿ ಒಣಗುತ್ತಿರುವ ಮೆಣಸಿನಕಾಯಿ ಬೆಳೆ ಸಂರಕ್ಷಿಸಲು ರೈತ ಕುಟುಂಬವೊಂದು ನೆಟ್ಟ ಮೆಣಸಿನಕಾಯಿ ಸಸಿಗೆ ನೀರು ಹಾಕುತ್ತಿದ್ದ ದೃಶ್ಯ ರೈತರು ಎದುರಿಸುತ್ತಿರುವ ದಾರುಣ ಪರಿಸ್ಥಿತಿಯನ್ನು ಸಾಕ್ಷೀಕರಿಸಿತು. ಅದರಲ್ಲೂ ಈ ರೈತ ಕುಟುಂಬದ 2/3 ವರ್ಷದ ಮಗುವೊಂದು ಅಜ್ಜ-ತಂದೆ-ತಾಯಿಗಳ ಕೆಲಸಕ್ಕೆ ಸಹಾಯ ಮಾಡುತ್ತಿದ್ದ ದೃಶ್ಯ, ರೈತರು ಸದ್ಯ ಎದುರಿಸುತ್ತಿರುವ ಪರಿಸ್ಥಿತಿಗೆ ಹಿಡಿದ ಕನ್ನಡಿಯಂತಿತ್ತು.

ಜೂನ್ ತಿಂಗಳಲ್ಲಿ ಮಳೆ ಕೊರತೆಯಿಂದ ಬಿತ್ತನೆ ಮಾಡದ ರೈತರು, ಜುಲೈನಲ್ಲಾದ ಮಳೆಗೆ ಹೆಚ್ಚಿನ ಪ್ರಮಾಣದಲ್ಲಿ ಗೋವಿನಜೋಳ ಸೇರಿದಂತೆ ಶೇಂಗಾ, ಹೆಸರು, ಹತ್ತಿ, ಮೆಣಸಿನಕಾಯಿ, ಉಳ್ಳಾಗಡ್ಡಿ, ಬೆಳ್ಳುಳ್ಳಿ ಬಿತ್ತನೆ ಮಾಡಿದ್ದಾರೆ. ಆದರೆ ಜುಲೈ ಕೊನೆಯವಾರದಿಂದ ಇದುವರೆಗೂ ಹನಿ ಮಳೆಯೂ ಆಗದಿರುವುದರಿಂದ ಬೆಳಗಳು ಒಣಗುತ್ತಿವೆ. ಬೆಳೆ ಉಳಿಸಿಕೊಳ್ಳಲು ರೈತರು ಟ್ಯಾಂಕರ್ ನೀರು, ಹಳ್ಳ, ಚರಂಡಿ ನೀರಿಗೆ ಮೊರೆ ಹೋಗಿದ್ದಾರೆ. ಇದೇ ಸಂದರ್ಭದಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆಯೂ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಮೂರೆಕರೆ ಜಮೀನಿನಲ್ಲಿ ಬೆಳ್ಳುಳ್ಳಿ ಬಿತ್ತನೆ ಮಾಡಿ ಅದರಲ್ಲರ್ಧ ಮೆಣಸಿನಕಾಯಿ ನೆಡಲಾಗಿದೆ. ಅದಕ್ಕಾಗಿ ಈಗಾಗಲೇ ಕನಿಷ್ಠ 50 ಸಾವಿರ ರೂ ಖರ್ಚು ಮಾಡಿದ್ದೇವೆ. ಎರಡು ತಿಂಗಳ ಬೆಳೆ ಈಗ ಮಳೆ ಕೊರತೆ-ಸುಡುಬಿಸಿಲಿನಿಂದ ಒಣಗುತ್ತಿವೆ. ಮಳೆ ಬಂದೇ ಬರುತ್ತದೆ, ಮಳೆ ಬರುವವರೆಗೆ ಹೇಗಾದರೂ ಮಾಡಿ ಬೆಳೆ ಉಳಿಸಿಕೊಂಡರೆ ಖರ್ಚು ಮಾಡಿದಷ್ಟು ಫಲ ಬಂದರೂ ಸಂಕಷ್ಟದಿಂದ ಪಾರಾಗಬಹುದು ಎಂಬ ಭರವಸೆಯಿಂದ ಮಕ್ಕಳು ಸೇರಿ ಮನೆ ಮಂದಿಯೆಲ್ಲಾ ನೀರು ಹಾಕುವ ಕಾರ್ಯ ಮಾಡುತ್ತಿದ್ದೇವೆ. ನಾವು ಹಾಕುವ ಅಲ್ಪಸ್ವಲ್ಪ ನೀರು ಕಾದ ಹಂಚಿನ ಮೇಲೆ ನೀರು ಹಾಕಿದಂತಾಗುತ್ತದೆ ಎಂಬ ಅರಿವಿದೆ. ರೈತರ ಪ್ರಯತ್ನ ವ್ಯರ್ಥವಾಗದಿರಲೆಂದು ಪ್ರಾರ್ಥಿಸುತ್ತೇವೆ ಎನ್ನುತ್ತಾರೆ ರೈತ ಮುಲ್ಲಾಸಾಬ ಮುಲ್ಲಾನವರ ಮತ್ತು ಕುಟುಂಬದವರು.



> ಜೂನ್ ಮತ್ತು ಆಗಸ್ಟ್‌ನಲ್ಲಿ ಸಂಪೂರ್ಣ ಮಳೆ ಕೊರತೆಯಾಗಿದ್ದು, ಈಗ ಮಳೆಯಾದರೂ ಬಹುತೇಕ ಬೆಳೆಗಳು ಸುಧಾರಿಸಲಾರದಷ್ಟು ಒಣಗಿವೆ. ಮಳೆ ಕೊರತೆ ಮತ್ತು ಬೆಳೆಹಾನಿಯ ಬಗ್ಗೆ ಸಂಪೂರ್ಣ ವರದಿಯನ್ನು ಮತ್ತು ವಾಸ್ತವಿಕ ಸ್ಥಿತಿಯನ್ನು ಹಿರಿಯ ಅಧಿಕಾರಿಗಳಿಗೆ ನೀಡಲಾಗಿದೆ. ತಾಲೂಕು ಬರಗಾಲ ಘೋಷಣೆಯ ಪಟ್ಟಿಯಲ್ಲಿದ್ದು, ಬೆಳೆಹಾನಿ-ಬೆಳೆವಿಮೆ ಪರಿಹಾರ ಕಲ್ಪಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.
>
> **– ಚಂದ್ರಶೇಖರ ನರಸಮ್ಮನವರ.**
> ಕೃಷಿ ಅಧಿಕಾರಿಗಳು.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka